ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಭಾರತ : ಲಕ್ಷಾಂತರ ದಂಗೆಗಳು

ಪ್ರಪಂಚದ ವ್ಯವಸ್ಥಾಪಕರೇ, ದಯವಿಟ್ಟು ದೂರ ಸರಿಯಿರಿ!

ವಿಷ; ಅಮೃತ

ಯುದ್ಧ ಮತ್ತು ರಾಜಕೀಯ ಮೌಲ್ಯಗಳು

ಜೀವನಶಿಕ್ಷಣ

ಯುದ್ಧ

ಸಂಪುಟ : ೧೧ ಮಾರ್ಚಿ ೧೯೬೧ ಸಂಚಿಕೆ : ೬

ಈ ಸಂಚಿಕೆಯಲ್ಲಿ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಸಂಪುಟ: ೧೧; ಮೇಲುಕೋಟೆ. ಮಾರ್ಚ್ ೧೫, ೧೯೯೧; ಸಂಚಿಕೆ ೯

ನಿಮ್ಮೊಂದಿಗೆ........

ಮತ್ತೊಂದು ಸರ್ಕಾರ ಉರುಳಿದೆ. ಚುನಾವಣೆ ನಡೆದರೂ ಯಾವುದೇ ಪಕ್ಷ ನಿಚ್ಚಳ ಬಹುಮತ ಪಡೆಯುವ ಸಾಧ್ಯತೆ ಕಾಣಿಸುತ್ತಿಲ್ಲ. ಪಕ್ಷಗಳ ಹೇಳಿಕೆ ಒತ್ತಟ್ಟಿಗಿಡಿ. ಸುದೀರ್ಘ ರಾಜಕೀಯ ಬಿಕ್ಕಟ್ಟು ಕೊನೆಗಾಣುವಂತೆ ಕಾಣುತ್ತಿಲ್ಲ. ಪ್ರಾದೇಶಿಕ ಶಕ್ತಿಗಳು, ಭಯೋತ್ಪಾದಕ ಗುಂಪುಗಳು, ದಳ್ಳಾಳಿಗಳು ಇನ್ನಷ್ಟು ಪ್ರಬಲರಾಗಬಹುದು. ನಾಳೆಯಲ್ಲಿ ನಂಬಿಕೆ ಕಳಕೊಂಡಿರುವ ರಾಜಕಾರಣಿಗಳು ಇನ್ನಷ್ಟು ಭ್ರಷ್ಟರಾಗಬಹುದು.

ಈ ಗೊಂದಲ, ಕೋಲಾಹಲ, ಅರಾಜಕ ಸ್ಥಿತಿಯಲ್ಲೂ ಹೊಸ ಬೆಳಕು ಕಾಣಿಸುತ್ತಿದೆ.

ನೈಪಾಲ್ ಹೇಳುವಂತೆ, "ಈ ದೇಶಕ್ಕೆ ಧುರೀಣರಿಂದಾಗಿ ಸ್ವಾತಂತ್ರ್ಯ ದೊರಕಿತು. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಬೀಜರೂಪದಲ್ಲಿದ್ದ ಆಸೆ, ಆಕಾಂಕ್ಷೆಗಳು, ಬಡತನ, ಅವಕಾಶಗಳ ಕೊರತೆಯಿಂದ ಹೆಪ್ಪುಗಟ್ಟಿದ್ದ ಹಲವು ಪ್ರವಾಹಗಳು ಇಂದು ಹರಿಯುತ್ತಿವೆ."

ನೆಮ್ಮದಿಯ ಆದರ್ಶ ಸಮಾಜದ ಕನಸುಕಂಡಿದ್ದ ಹಲವರಿಗೆ ಈ ಬೆಳವಣಿಗೆಗಳು ಆಘಾತ ನೀಡಿರಬಹುದು. ಈ ದೇಶ ಅಮೆರಿಕಾದಂತೆ ಶ್ರೀಮಂತವಾಗುತ್ತದೆ ಎಂಬ ಭ್ರಮೆಯುಲ್ಲಿದ್ದ ಮಧ್ಯಮ ವರ್ಗಕ್ಕೆ ನಿರಾಸೆಯಾಗಿರಬಹುದು. ಶ್ರೀಮಂತರಿಗೆ ಹೊಸ ಪ್ರಾದೇಶಿಕತೆಗಳ ಮೂಲಕ ಚಿಗುರುತ್ತಿರುವ ಸಮಾಜವಾದೀ ಭ್ರಷ್ಟತೆಗಳು ಭಯ ಹುಟ್ಟಿಸಿರಬಹುದು.

ಆದರೆ ನೆನಪಿಡೋಣ – ಇಂದು ಭ್ರಷ್ಟಾಚಾರ ಜನರಿಗೆ ಗೊತ್ತಿದೆ. ಅದನ್ನು ತೊಡೆಯುವ ಬಗೆ ಹೇಗೆ ಎಂಬುದು ಮಾತ್ರ ಗೊತ್ತಿಲ್ಲ.

ಇಂದು ತಮ್ಮ ಹಕ್ಕುಗಳ ಬಗ್ಗೆ ಜನರಿಗೆ ಅರಿವಿದೆ. ಅನ್ಯಾಯ, ಅಸಮಾನತೆಗಳು ಅರ್ಥವಾಗಿದೆ. ಈ ಚಡಪಡಿಕೆಯೇ ಕಾಂಗ್ರೆಸ್ಸನ್ನು ತೊರೆದು ಉಳಿದ ಪಕ್ಷಗಳಿಗೆ ಮಣೆ ಹಾಕುವಂತೆ ಮಾಡಿದೆ.

ನೂರು ವರುಷಗಳ ಹಿಂದೆ ರಾಜಶಾಹಿಯ ದೌಲತ್ತು ಜನರಲ್ಲಿ ಮೆಚ್ಚುಗೆ ಪಡೆದರೆ ಇಂದು ಅದು ಅಸೂಯೆ ಮಿಶ್ರಿತ ಟೀಕೆಗೊಳಗಾಗುತ್ತಿದೆ. ಎಲ್ಲವೂ ಸರಿಯಾಗಿದೆ ಎಂದು ಭಾವಿಸಿದ್ದಲ್ಲೆಲ್ಲ ಪ್ರಾಂತೀಯ ಬಡತನ, ನಾಳೆಯ ಭಯ ಚಳುವಳಿಯ ರೂಪ ಪಡೆದಿದೆ. ಈ ಎಲ್ಲ ಬೆಳವಣಿಗೆಗಳ ಹಿಂದೆ ಪ್ರಜಾಸತ್ತೆಯ ಸೂಕ್ಷ್ಮಗಳ ಅರಿವು ಕೆಲಸ ಮಾಡಿದೆ.

ಪ್ರಾಯಶಃ ಈ ಸಾವಿರಾರು ನದಿಗಳಿಂದ ನಮ್ಮ ಭ್ರಷ್ಟ ರಾಜಕಾರಣಿಗಳು, ಅಧಿಕಾರಶಾಹಿ ದಳ್ಳಾಳಿಗಳು ಇನ್ನು ಕೊಂಚ ದಿನ ತಪ್ಪಿಸಿಕೊಂಡಾರು; ಚಳುವಳಿಗಳ ಆಶಯಗಳನ್ನು ದಾರಿತಪ್ಪಿಸಿ ಹತಾಶಗೊಳಿಸಿಯಾರು.

ಸದ್ಯ ಇರುವ ಆಡಳಿತ ವ್ಯವಸ್ಥೆಯೇ ಪ್ರಜಾಸತ್ತಾತ್ಮಕ ವ್ಯವಸ್ಥೆ ಎಂದು ನಂಬಿದ್ದ ಒಂದು ತಲೆಮಾರಿಗೆ, ಆಡಳಿತ ವ್ಯವಸ್ಥೆ ವಿರುದ್ಧ ಹೆಚ್ಚುತ್ತಿರುವ ಅವಿಶ್ವಾಸ (ಶಸ್ತ್ರಸಹಿತ) ದಂಗೆ ಪ್ರಜಾಸತ್ತೆಯ ಬಗ್ಗೆ ಇರುವ ಅಪನಂಬಿಕೆ ಎಂಬಂತೆ ಕಾಣಿಸೀತು.

ಆದರೆ ನಿಜವಾದ ಪ್ರಜಾಸತ್ತೆಯ ಕಲ್ಪನೆಯ ಅರಿವೇ ಈ ಪೊಳ್ಳು ಆಡಳಿತ ವ್ಯವಸ್ಥೆಯನ್ನು ನಿರಾಕರಿಸುವಂತೆ ಮಾಡುತ್ತದೆ. ಇಂದಿನ ಸ್ಥಿತಿ ಈ ಸಂಕ್ರಮಣ ಸ್ಥಿತಿಯದ್ದು, ಪರ್ಯಾಯ ಆಡಳಿತ ವ್ಯವಸ್ಥೆ ಯಾವುದು ಎಂಬ ಕಲ್ಪನೆ ಇನ್ನೂ ಬಂದಿಲ್ಲದಿರಬಹುದು, ಅದು ಸಹಜ.

ಆದರೆ ಈ ಕುದಿಯುವ ಅರಾಜಕ ಸ್ಥಿತಿಯ ಕೊಪ್ಪರಿಗೆಯಲ್ಲಿ ಸದ್ಯದ ಅರೆಬೆಂದ ಪಕ್ಷ ಸಿದ್ಧಾಂತಗಳು, ಹುಸಿ ಭರವಸೆಗಳ ಪಕ್ಷ ರಾಜಕಾರಣ, ಶಿಥಿಲವಾದ ಆಡಳಿತ ವ್ಯವಸ್ಥೆ, ಸಿಕ್ಕಲ್ಲಿ ಮುಕ್ಕಿ ನಿರ್ಲಕ್ಷ್ಯ ತೋರುವ ಅಧಿಕಾರಶಾಹಿ—ಇವೆಲ್ಲವೂ ಕರಗಬೇಕು. ಭ್ರಮೆ ಕಳೆದು, ಹೊಸ ನಿಜದ ಎದುರು ಪ್ರತಿಯೊಬ್ಬನೂ ಮುಖಾಮುಖಿಯಾಗುವ ಸ್ಥಿತಿ ಬರಬೇಕು. ಯಾವ ಪ್ರವಾದಿ, ನಾಯಕನೂ ಬರಲಾರ; ನಮ್ಮ ಭವಿಷ್ಯಕ್ಕೆ ನಾವೇ ಹೊಣೆ ಎಂಬ ಅರಿವು ಮೂಡಲು ನಾವೆಲ್ಲ ಒಂದು ಬೆಲೆ-ತೆರಬೇಕು. ಒಂದು ದೇಶದ ಚರಿತ್ರೆಯಲ್ಲಿ ಈ ೪೦ ವರ್ಷ ಹೆಚ್ಚಲ್ಲ, ಮುಂದಿನ ಹತ್ತು ವರ್ಷವೂ ಹೆಚ್ಚೇನಲ್ಲ.

ಮುಂದಿನ ಇನ್ನೊಂದೆರಡು ಚುನಾವಣೆಗಳೂ ಈಗಿರುವಂತೇ ನಡೆದಾವು. ಕಣ್ಣೆದುರು ಮೂಲಂಗಿ ತೋರಿ ಸವಾರಿ ಮಾಡಿಯಾರು. ಸ್ಥಿತಿ ಇನ್ನಷ್ಟು ಕೊಳೆತೀತು.

ಪ್ರಾಯಶಃ ಇನ್ನಷ್ಟು ಕೆಡುವುದರಲ್ಲೇ ಭವಿಷ್ಯದ ಪ್ರಗತಿ ಅಡಗಿದೆ.

—ಕೆ.ಪಿ. ಸುರೇಶ್

ಭಾರತ : ಲಕ್ಷಾಂತರ ದಂಗೆಗಳು

—ವಿ. ಎಸ್. ನೈಪಾಲ್

(India – A Million Mutinies Now ವಿ. ಎಸ್. ನೈಪಾಲ್‌ರ ಇತ್ತೀಚಿನ ಕೃತಿ. ಭಾರತದ ಸಮಾಜ, ಸಂಸ್ಕೃತಿ ಬಗ್ಗೆ An Area of Darkness; India - A Wounded Civilization ಮುಂತಾದ ವಿವಾದಗ್ರಸ್ತ, ಒಳನೋಟಗಳುಳ್ಳ ಕೃತಿಗಳನ್ನು ಬರೆದ ನೈಪಾಲ್ ಶ್ರೇಷ್ಠ ಕಾದಂಬರಿಕಾರ ಕೂಡಾ. ಭಾರತದಿಂದ ವೆಸ್ಟ್ ಇಂಡೀಸ್‌ಗೆ ವಲಸೆ ಹೋದ ಭಾರತೀಯ ವಂಶಜರಾದ ನೈಪಾಲ್ ತನ್ನ ಬೇರುಗಳನ್ನು ಹುಡುಕುತ್ತಾ ಇರುವ ಬರಹಗಾರ.

ಈ ಲಕ್ಷಾಂತರ ದಂಗೆಗಳು, ವರ್ತಮಾನ ಭಾರತದ ಬಗ್ಗೆ ಗಾಢ ಒಳ ನೋಟಗಳುಳ್ಳ ಕೃತಿ. ಈ ಕೃತಿಯ ಒಂದು ಭಾಗವನ್ನು ಅನುವಾದಿಸಿ ನೀಡಲಾಗಿದೆ –ಸಂ.)

ರಸ್ತೆ ಬದಿಯ ಮಿಲ್ಕ್ ಬಾರ್‌ನಲ್ಲಿ ಕೂತೆವು.

"ಸದಾ ಆತಂಕದಲ್ಲೇ ಇರುತ್ತೀಯಾ ನೀನು?" ನಾನು ಅನ್ವರ್‌ನನ್ನು ಕೇಳಿದೆ.

"ಈ ಸ್ಥಿತಿ ಅವನಲ್ಲಿ ಕೋಲಾಹಲ ಎಬ್ಬಿಸುತ್ತೆ" ನಿಖಿಲ್ ವ್ಯಾಖ್ಯಾನಿಸಿದ. ಅನ್ವರ್ ಮುಂದುವರಿಸಿದ, "ಈ ಮಕ್ಕಳು. ಈ ಮಕ್ಕಳ ಜಗಳ, ದೊಡ್ಡವರ ದೊಂಬಿಯಾಗುತ್ತೆ. ಇದನ್ನ ತಡೆಯೋದಕ್ಕೆ ನನ್ನ ಕೈಲಾಗೋದಿಲ್ಲ ಎಂದು ನನಗನ್ನಿಸುತ್ತೆ. ನೆರೆಹೊರೆಯವರ ಮಧ್ಯ ಸದಾ ಜಗಳ ನಡೀತಿರುತ್ತೆ. ನೆರೆಹೊರೆಯವರು ಹಿಂದೂ ಮುಸ್ಲಿಮರಾದರೆ ಇದು ಕೋಮು ಗಲಭೆಯಾಗುತ್ತೆ. ಕ್ರಿಕೆಟ್ ಮ್ಯಾಚ್ ಇರುವಾಗಲಂತೂ ಇದು ಜಾಸ್ತಿ. ವಿಶ್ವಕಪ್ ಟೈಮ್‌ನಲ್ಲಿ ನಾವೆಲ್ಲ ಭಾರತ-ಪಾಕಿಸ್ತಾನ ಆಡುವ ಬಗ್ಗೆ ಹೆದರಿದ್ದೆವು. ಪಾಕಿಸ್ತಾನ ಸೆಮಿ ಫೈನಲ್‌ನಲ್ಲಿ ಸೋತಾಗ ಹಿಂದೂಗಳು ನಮ್ಮ ಕಾಲನಿಯ ಮೇಲೆ ಕಲ್ಲೆಸೆದು ಗುಡಿಸಲುಗಳನ್ನು ಬೂದಿ ಮಾಡಿದ್ರು."

"ನಿನ್ನ ಕುಟುಂಬ ಈ ಗಲಭೇನಲ್ಲಿ ಸೇರ್ಕೊಂಡಿತ್ತಾ?" ಎಂದು ಕೇಳಿದೆ. ಅವನ ಉತ್ತರ ಅನಿರೀಕ್ಷಿತವಾಗಿತ್ತು. "ನನ್ನ ತಮ್ಮಂದಿರೆಲ್ಲಾ ಗೂಂಡಾಗಳು, ರೌಡಿಗಳು. ಅವರೇನೂ ಒಳ್ಳೇ ಮನುಷ್ಯರಲ್ಲ, ಅದಕ್ಕೇ ನಮ್ಮ ಮನೆ ಉಸಾಬರಿಗೆ ಯಾರೂ ಬರೋದಿಲ್ಲ."

ಒರಟು, ಕಠಿಣ ಮನುಷ್ಯರು. ಒಳ್ಳೇ ಮನುಷ್ಯರಲ್ಲ. "ಅವರನ್ನ ನನ್ನ ತಮ್ಮಂದಿರು ಅನ್ನೋಕೆ ಮನಸ್ಸು ಬರಲ್ಲ" ಅನ್ವರ್ ಕಹಿಯಾಗಿ ಹೇಳಿದ. ಮರುಕ್ಷಣವೇ ಕೊಂಚ ಮೃದುವಾದ. "ಈ ವಾತಾವರಣ ಅವರನ್ನು ಈ ರೀತಿ ಮಾಡಿದೆ. ಇಲ್ಲಿ ಬದುಕುಳಿಯಬೇಕಾದರೆ ರೌಡಿಗಳಾಗಲೇಬೇಕೇನೋ. ಅವರ ಮೂರ್ಖತನ ಹೇಗಿರುತ್ತ ಗೊತ್ತೇ? ನೀವು ಪೇಪರ್ನಲ್ಲಿ ಓದಿರಬೇಕಲ್ಲ, ಬಾಂಬೆಯ ಭೂಗತ ಜಗತ್ತಿನ ಹೊಸ ದೊರೆಯ ಬಗ್ಗೆ. ಆತ ಒಂದಸಾರಿ ಯಾರನ್ನೋ ಸಾಯಿಸಲು ಕಾಂಟ್ರಾಕ್ಟ್ ಪಡೆದು ಇಲ್ಲಿಗೆ ಬಂದ. ನಮ್ಮ ಕಾಲೊನಿಗೆ ಕಾಲಿಟ್ಟದ್ದಕ್ಕೆ ನನ್ನ ತಮ್ಮಂದಿರು ಅವನ ಜೊತೆಗೆ ಕಾಲು ಕೆರೆದು ಜಗಳಕ್ಕೆ ನಿಂತಿದ್ರು. ಇಬ್ರೂ ಬೈದಾಡಿದ್ರು. ಏನ್ಮಾಡ್ತೀಯೋ, ನೋಡ್ತೀನಿ ಅಂತೆಲ್ಲಾ ಶುರು ಮಾಡಿದ್ರು. ನನ್ನ ತಮ್ಮ ಅಂಬಾಸಡರ್ ಕಾರ್ ತುಂಬ ಶಸ್ತ್ರಾಸ್ತ್ರ ತುಂಬಿಕೊಂಡು ಆ ಡಾನ್ ಏರಿಯಾ ಮೇಲೆ ಧಾಳಿಗೆ ಹೊರಟಿದ್ದ. ಯಾರೋ ಪೋಲೀಸ್ರಿಗೆ ತಿಳಿಸಿದ್ರು. ನನ್ನ ತಮ್ಮಂದಿರು ಅರೆಸ್ಟಾದ್ರು. ಎರಡು ದಿನ ಕಸ್ಟಡಿನಲ್ಲಿದ್ರು. ಆ ಮೇಲೆ ಯಾರೋ ಬೈಲ್ ಕೊಟ್ಟು ಬಿಡಿಸಿದ್ರು."

"ನಿನ್ನ ತಮ್ಮಂದಿರಲ್ಲಿ ದುಡ್ಡು ಸಾಕಷ್ಟಿದೆಯಾ?"

"ದುಡ್ಡು ಮಾಡ್ತಾರೆ, ಆ ಮೇಲೆ ಜೂಜಾಡೋದಿಕ್ಕೆ ಶುರುಮಾಡ್ತಾರೆ."

"ಅವ್ರೂ ನಿನ್ನಂಗೇ ಆತಂಕದಲ್ಲಿ ಬದುಕ್ತಿದಾರಾ?"

"ಅವರಿಗೆ ನನ್ನಂಥಾ ಮನಸ್ಥಿತಿ ಇಲ್ಲ. ಸಂದರ್ಭ ಬಂದ್ರೆ ಹಿಂದೆ ಮುಂದೆ ನೋಡದೇ ಪ್ರಾಣ ಕೊಡೋದಿಕ್ಕೂ ಅವ್ರು ತಯಾರು."

ನಾನು ೯೨೩ ರ ಕೋಮು ಗಲಭೆ ಬಗ್ಗೆ ಕೇಳಿದೆ. ಅನ್ವರ್ ಗ್ಲಾಸಿನ ಹಾಲನ್ನು ಊದಿ ತಣಿಸತೊಡಗಿದ. ಹಾಲೇನೂ ಬಿಸಿ ಇರಲಿಲ್ಲ. ಆತ ಬೇಡವೆಂದರೂ ಆತನ ಉದ್ವಿಗ್ನತೆ ಉಸಿರಿನೊಂದಿಗೆ ಹೊರ ಬಿದ್ದಿತ್ತು.

"ನಾನಾಗ ಮೆಟ್ರಿಕ್ ಕೊನೆ ವರ್ಷದಲ್ಲಿದ್ದೆ. ಮರೀನ್ ಡ್ರೈವ್ ಬಳಿ ಮುಸ್ಲಿಂ ಸ್ಮಶಾನ ಒಂದಿದೆ. ರಮ್ಜಾನ್ ಟೈಮಲ್ಲಿ ಸ್ಮಶಾನಕ್ಕೆ ಹೋಗೋದು ನಮ್ಮ ಸಂಪ್ರದಾಯ. ನಮ್ಮ ಕಾಲನಿಯಿಂದ ಒಂದು ಗುಂಪು ಅಲ್ಲಿಗೆ ಹೋಗಿ ಬರ್ತಾ ಇರೋವಾಗ ಶಿವಸೇನೆಯವರು ನಮ್ಮ ಮೇಲೆ ಕಲ್ಲು ಎಸೆದರು. ನಾವು ಪೋಲೀಸರಿಗೆ ತಿಳಿಸಿದೆವು. ನಾವೇ ಗಲಾಟೆ ಮಾಡ್ತಿದೀವಿ ಅನ್ನುವ ಹಾಗೆ ಅವರು ನಮ್ಮೊಂದಿಗೆ ಎರಡುಮ್ಮೈಲಿ ಬಂದ್ರು. ಆ ರಾತ್ರಿ ಗಲಾಟೆಯ ಚಿಹ್ನೆಗಳೇನೂ ಕಾಣಿಸಲಿಲ್ಲ. ಆಮೇಲೆ ಗಲಭೆ ಶುರುವಾಗಿದ್ದು ಇಲ್ಲಿಂದ ೨೫ ಕಿ. ಮಿ. ದೂರದ ಪ್ರದೇಶದಲ್ಲಿ."

ಮಿಲ್ಕ್ ಬಾರ್‌ನ ಗದ್ದಲದಲ್ಲಿ ಅನ್ವರ್‌ನ ಮಾತಿನ ವಿವರಗಳು ಸ್ಪಷ್ಟವಾಗುತ್ತಿರಲಿಲ್ಲ.

ಬೆಳಿಗ್ಗೆ ಮೂರು ಗಂಟೆಯ ಹೊತ್ತಿಗೆ ನಾವು ನಮ್ಮ ಕಾಲೊನಿ ತಲುಪಿದೆವು.

ನಮ್ಮಲ್ಲಿ ಕೆಲವರು ಕಲ್ಲೇಟಿನಿಂದ ಗಾಯಗೊಂಡಿದ್ದರು. ಆ ರಾತ್ರಿ ಪೂರ್ತಾ ಯಾವ ಮುಸ್ಲಿಮನೂ ನಿದ್ರೆಮಾಡಲಿಲ್ಲ. ಮಾರನೇ ದಿನ ನನಗೆ ಆ ಘಟನೆ ಮರೆತೇ ಹೋಗಿತ್ತು. ನನ್ನ ಮಿತ್ರನೊಂದಿಗೆ ನಾನು ಯಾರದೋ ಮನೆಗೆ ಹೋಗಿದ್ದಾಗ ಆ ಮನೆ ತುಂಬಾ ಮಾರಕಾಸ್ತ್ರ ತುಂಬಿಟ್ಟಿದ್ದು ನೋಡಿದೆ. ಯಾರೋ ಭೂಗತ ದೊರೆಯೊಬ್ಬ ಈ ಕೆಲಸ ಮಾಡಿದ್ದ. ಆ ರಾತ್ರಿ ಗುಂಡು ಹಾರಾಟ ನಡೆಯಿತು. ಹಗಲೆಲ್ಲಾ ಕರ್ಫ್ಯೂ. ಶಸ್ತ್ರಾಸ್ತ್ರ ಇದೆಯಾ ಅಂತ ತನಿಖೆ ಮಾಡಲು ಪೋಲೀಸರು ಬಂದಿದ್ದರು."

"ಪೋಲೀಸ್ ಬಂದಿದ್ದರಿಂದ, ಜನ ಶಾಂತವಾದರಾ?"

"ನನಗೇ ಪೋಲೀಸರ ಮೇಲೂ ವಿಶ್ವಾಸ ಇಲ್ಲ. ಇಲ್ಲಿ ಹಸುಗಳನ್ನು ಎಲ್ಲೆಂದರಲ್ಲಿ ಕೊಲ್ಲುವಂತಿಲ್ಲ. ಕಸಾಯಿ ಖಾನೆಗೇ ಒಯ್ಯಬೇಕು. ಆದ್ರೆ ಪೋಲೀಸರಿಗೆ ಲಂಚ ಕೊಟ್ಟರೆ ಎಲ್ಲೂ ಕೊಲ್ಲಬಹುದು. ಮೇಕೆಗಳನ್ನು ನಮ್ಮ ಏರಿಯಾದಲ್ಲೇ ಕಡೀತಾರೆ. ಅದೂ ಪೋಲಿಸ್ನೋರ ಎದುರಲ್ಲೇ. ಪೋಲೀಸರಿಗೆ ಈ ರೀತಿ ಸವಾಲು ಹಾಕೋದು ಗಂಡಸ್ತನದ ವಿಚಾರ ಇಲ್ಲಿ."

"ಪೋಲೀಸ್ನೋರು ಮುಸ್ಲಿಮರ ಬಗ್ಗೆ ತಾರತಮ್ಯ ತೋರ್‌ಸ್ತಾರೆ. ಮುಸ್ಲಿಮರಿಗೆ ಪೋಲೀಸರ ಬಗ್ಗೆ ತಿರಸ್ಕಾರ ಇದೆ" ಅನ್ವರ್ ಮುಂದುವರಿಸಿದ.

"ಇದೆಲ್ಲದರ ಅರ್ಥ ಏನು?" ನಾನು ಕೇಳಿದೆ.

"ಮುಸ್ಲಿಮರಲ್ಲಿ ವಿವೇಕ ಇರೋ ಮಂದಿ ಬಹಳ ಕಮ್ಮಿ. ವಿದ್ಯಾವಂತ ಮುಸ್ಲಿಮರೇ ಇಲ್ಲಿ ಕಡಿಮೆ. ಅವರು ಈ ಗಲಾಟೆಗೆ ತಲೆ ಹಾಕೊಲ್ಲ.

"ಅಂದ್ರೆ ಇದು ಹೀಗೇ ಮುಂದುವರಿಯುತ್ತೆ?"

"ಇದರ ಮುಕ್ತಾಯ ನನಗೆ ಕಾಣ್ಸಲ್ಲ. ಇದಕ್ಕೆ ಹೇಗೆ ಪರಿಹಾರ ಅಂತಲೂ ನನಗೆ ಗೊತ್ತಿಲ್ಲ"

"ಗಲಭೆ ಕಾಲದಲ್ಲಿ ಜನ ಜೀವನ ಹೇಗಿರುತ್ತೆ?"

"ಗಲಭೆ ಟೈಮಲ್ಲಿ ಜನಕ್ಕೆ ನಿದ್ರೆಯ ಅರ್ಥವೇ ಗೊತ್ತಿರಲ್ಲ. ಸಮುದಾಯದ ಒಬ್ಬನ ಮೇಲೆ ಹಲ್ಲೆ ನಡೆದಾಗ ನಾವೇನೂ ಮಾಡದೇ ಸುಮ್ಮನಿರುವುದನ್ನು ಘೋರ ಪಾಪ ಎಂದು ಜನ ಭಾವಿಸುತ್ತಾರೆ."

'ಬಾಂಬೇ ಭೂಗತ ಪ್ರಪಂಚದ ನಾಯಕರಲ್ಲಿ ಮುಸ್ಲಿಮರೇ ಯಾಕೆ ಜಾಸ್ತಿ ಇದಾರೆ?" ನಾನು ಕೇಳಿದೆ.

"ನಾನು ಆಗಲೇ ಹೇಳಿದೆನಲ್ಲ. ನಮ್ಮಲ್ಲಿ ವಿದ್ಯಾವಂತರು ಕಡಿಮೆ ಅದಕ್ಕೇ ಅವರು ಹರೆಯದಲ್ಲೇ ಹಾದಿ ತಪ್ಪುತ್ತಾರೆ"

"ಈ ನಾಯಕರು ಧಾರ್ಮಿಕ ಮನೋಭಾವದವರಾ?"

"ಹೂಂ. ಅವರು ಇಸ್ಲಾಂಗಾಗಿ ಹೋರಾಡುತ್ತಾರೆ. ಇದು ವಿತಂಡ ಸ್ಥಿತಿ. ಅವರು ತಮ್ಮ ಕ್ರಿಮಿನಲ್ ಚಟುವಟಿಕೆಗಳನ್ನು ಮುಂದುವರಿಸುತ್ತಾರೆ. ಇನ್ನೊಂದೆಡೆ ಕುರಾನ್ ಓದಿ ನಮಾಜ್ ಮಾಡುತ್ತಾರೆ. ನಮ್ಮ ಜನಗಳೇನು ಅವರನ್ನು ಹೊಗಳೋದಿಲ್ಲ. ಆದರೆ ಅವರು ಬದುಕುವ ರೀತಿಗೆ ಜನ ಮಾರು ಹೋಗುತ್ತಾರೆ, ಅಷ್ಟೇ"

"ನಿಮ್ಮ ಕಾಲನಿಯ ಮಕ್ಕಳ ಭವಿಷ್ಯ ಏನು?

"ಓಹ್ ಭೀಕರ. ಈ ಮಕ್ಕಳು ಹಲ್ಲೆ ಕೊಲೆ ನೋಡ್ತಾನೇ ಬೆಳಿತಾರೆ"

"ನೀನು ಕೊಲೆ ನೋಡಿದೀಯಾ?" ನಾನು ಕೇಳಿದೆ. ಮಿಲ್ಕ್ ಬಾರ್‌ನ ಯಜಮಾನ ಈಗ ರೇಗ ತೊಡಗಿದ್ದ. ನಾವು ಭಾಳ ಹೊತ್ತು ಆ ಟೇಬಲ್‌ನಲ್ಲಿ ಕೂತಿದ್ದಕ್ಕೆ ಅವನಿಗೆ ರೇಗಿತ್ತು. ನಿಖಿಲ್ ಎಲ್ಲರಿಗೂ ಜಾಮೂನು ತರಿಸಿದ.

ಅನ್ವರ್ ಮುಂದುವರಿಸಿದ, "ನಾನು ಮೊದಲ ಕೊಲೆ ನೋಡಿದಾಗ ನನಗೆ ಹತ್ತು ವರ್ಷ. ನಾವು ಬ್ಯಾಡ್ಮಿಂಟನ್ ಆಡ್ತಾ ಇದ್ವಿ. ಫೀಲ್ಡ್ ಹತ್ತಿರ ಒಂದು ಗುಡಿಸಲು ಇತ್ತು. ಅಲ್ಲಿ ಇಬ್ಬರು ಜಗಳಾಡ ತೊಡಗಿದರು. ಇಬ್ಬರೂ ಒಂದು ಕೈಗಾಡಿ ಕೆಳಗೆ ದಿನವೂ ಮಲಗೋರು. ಇಬ್ಬರಿಗೂ ಸುಮಾರು ಮೂವತ್ತು ವರ್ಷ ವಯಸ್ಸು. ಒಬ್ಬ ಇದ್ದಕ್ಕಿದ್ದ ಹಾಗೆ ಓಡತೊಡಗಿದ. ಏನಾಯಿತು ಎಂದು ನಾವು ಕೈಗಾಡಿ ಬಳಿಗೆ ಓಡಿದೆವು. ಕೈಗಾಡಿ ಮೇಲೆ ಬಿದ್ದಿದ್ದವನ ಕತ್ತು ಮುಕ್ಕಾಲು ಪಾಲು ಕತ್ತರಿಸಿ ಹೋಗಿತ್ತು. ಅವನು ಇನೂ ಸತ್ತಿರಲಿಲ್ಲ. ಸಾವಿನ ಅಂಚಿನಲ್ಲಿ ಭೀಕರವಾಗಿ ಒದ್ದಾಡುತ್ತಿದ್ದ. ಅವನು ಒಂದು ಅಂಡರ್ ವೇರ್, ಮೈಮೇಲೊಂದು ಬಟ್ಟೆ ಅಷ್ಟೇ ಹಾಕ್ಕೊಂಡಿದ್ದ. ಅವನ ಒದ್ದಾಟಕ್ಕೆ ಕೈಗಾಡಿ ನಡುಗಿ ತಲೆಕೆಳಗಾಯಿತು. ನಾವು ಆರೇಳು ಮಂದಿ ಮಕ್ಕಳಷ್ಟೇ ಅಲ್ಲಿ ಇದ್ದವು. ದೇಹ ನೆಲಕ್ಕೆ ಜಾರಿ ಬಿದ್ದಿದ್ದ ರಕ್ತ ನಮ್ಮ ಮೇಲೆಲ್ಲಾ ಚಿಮ್ಮಿತು. ನನಗೆ ವಿಪರೀತ ಭಯವಾಗಿತ್ತು. ಅನ್ವರ್ ನಗತೊಡಗಿದ, "ನಾವು ಓಡಿ ಹೋಗಿ ನಮ್ಮ ಬಟ್ಟೆ ಮೇಲೆ ಚೆಲ್ಲಿದ್ದ ಹಸಿ ರಕ್ತದ ಕಲೆಯನ್ನು ತೊಳೆದೆವು"

"ಅದಾದ ಮೇಲೆ ಎಷ್ಟು ಕೊಲೆ ನೋಡಿದೀಯಾ?"

"ಹತ್ತೋ ಹನ್ನೆರಡು ಇರಬಹುದು"

"ನೀನು ಯಾಕೆ ನಗ್ತಿದೀಯಾ?"

"ಇಲ್ಲಿನ ನಿತ್ಯದ ಪರಿಪಾಟು ಇದು. ಈ ಕೊಲೆಗಳ ಕಾರಣ ಬಹಳ ಕ್ಷುಲ್ಲಕ. ಉದಾಹರಣೆಗೆ ಒಂದು ದಿನ ಇಬ್ಬರು ಛತ್ರಿ ಹಿಡಕೊಂಡು ಬಡಿದಾಡಿದರು. ಒಬ್ಬ ಓಡಿ ಬಂದು ಒಂದು ಮನೆಯೊಳಕ್ಕೆ ನುಗ್ಗಿದ. ನಾನು ನನ್ನ ಮಿತ್ರನ ಜೊತೆ ಮಾತಾಡುತ್ತಾ ನಿಂತಿದ್ದೆ. ನಾವು ನೋಡುವಷ್ಟರಲ್ಲಿ ಬೆನ್ನಟ್ಟಿ ಬಂದವನು ಮನೆ ಒಳಗೆ ಸೇರಿದ್ದವನನ್ನು ಎಳೆದು ಚಾಕುವಿನಿಂದ ಇರಿದು ಕೊಂದ ಅಷ್ಟೇ"

ತಮಿಳು ನಾಡಿನ ಉತ್ತರ ಭಾಗದಲ್ಲಿ ರೈತ ದಂಗೆ ಆರಂಭವಾಗಿತ್ತು. ರಾಜ್ಯ ಶಕ್ತಿ ಅದನ್ನು ನಾಶಮಾಡಿತು. ನಲುವತ್ತು ವರ್ಷಗಳ ಸ್ವಾತಂತ್ರ್ಯದ ಅವಧಿಯಲ್ಲಿ ದಂಗೆಗಳನ್ನು ಹೇಗೆ ಅಡಗಿಸಬೇಕೆಂಬುದನ್ನು ಸರ್ಕಾರ ಕಲಿತಿತ್ತು. ದಂಗೆಯಲ್ಲಿ ಬದುಕುಳಿದವರು ಮತ್ತೆ ನಾಗರಿಕ ಸಮಾಜಕ್ಕೆ ಮರಳಿದ್ದರು.

ನನ್ನ ಜೊತೆ ಇಬ್ಬರು ಪತ್ರಕರ್ತರಿದ್ದರು. ಪೋಲೀಸ್ ಅಧಿಕಾರಿಗಳು ಆ ಇಬ್ಬರು ಮಾಜೀ ಕ್ರಾಂತಿಕಾರಿಗಳನ್ನು ಬರಹೇಳಿದ್ದರು. ಇಬ್ಬರೂ ಪಂಚೆ ಮತ್ತು ಸಡಿಲ ಅಂಗಿ ಧರಿಸಿದ್ದರು. ಅವರಲ್ಲಿ ವಯಸ್ಸಾದವನು ಕಥೆ ಹೇಳಿದ. ಆತನ ಅಣ್ಣ ಅವನನ್ನು ಈ ಕ್ರಾಂತಿಗೆ ಪರಿಚಯಿಸಿದ್ದ. ಆತನ ಅಣ್ಣ ಒಬ್ಬ ಜಮೀಂದಾರನನ್ನು ಕೊಲೆ ಮಾಡಿದ್ದ.

ಅವರ ಹಳ್ಳಿಯಲ್ಲಿ ಕೆಲವೇ ಬ್ರಾಹ್ಮಣರಿದ್ದರು. ಆ ಪ್ರದೇಶದಲ್ಲಿ ಆದಿವಾಸಿಗಳು; ಹಿಂದುಳಿದ ಜಾತಿಗಳವರೇ ಜಾಸ್ತಿ. ಜಮೀಂದಾರರು ಈ ಬಡವರನ್ನು ಸುಲಿಯುತ್ತಿದ್ದರು. ಹೆಚ್ಚಿನ ಜಮೀಂದಾರರು ರೆಡ್ಡಿಗಳು. ಕನಿಷ್ಠ ಕೂಲಿ ಉಳಿದೆಡೆ ಗಂಡಸರಿಗೆ ೯ ರೂ; ಹೆಂಗಸರಿಗೆ ೫ ರೂ ಇದ್ದಾಗ ಈ ಜಮೀಂದಾರರು ಗಂಡಸರಿಗೆ ೫ ರೂಪಾಯಿ ಹೆಂಗಸರಿಗೆ ೩ ರೂಪಾಯಿ ಕೊಡುತ್ತಿದ್ದರು. ಈ ಕ್ರಾಂತಿಕಾರಿಗಳು ಬಡವರನ್ನು ಸಂಘಟಿಸಿದರು. ಹೆಚ್ಚು ಕೂಲಿ ಕೊಡಲು ಜಮೀಂದಾರರು ನಿರಾಕರಿಸಿದರು. ಒಬ್ಬ ಕ್ರಾಂತಿಕಾರಿಯನ್ನು ಜಮೀಂದಾರರು ಕೊಂದುಹಾಕಿದರು. ಅದಕ್ಕಾಗಿ ಆ ಜಮೀಂದಾರನನ್ನು ಕೊಲ್ಲಲು ತೀರ್ಮಾನಿಸಿದರು. ಮೂರು ಬಾರಿ ಯತ್ನಿಸಲಾಯಿತು. ಒಮ್ಮೆ ಬಸ್ಸಿನಲ್ಲಿ ಆತ ಪ್ರಯಾಣಿಸುತ್ತಿದ್ದಾಗ, ಆರು ಜನ ಮಾವೋ ಕ್ರಾಂತಿಕಾರಿಗಳು ಆತನ ಬೆನ್ನು ಹತ್ತಿದರು. ಆದರೆ ಪ್ರಯಾಣಿಕರಿಗೆ ತೊಂದರೆಯಾದೀತು ಎಂದು ಕೈಚೆಲ್ಲಿದರು. ಎರಡನೇ ಬಾರಿ ಹೊಲದಲ್ಲಿ ಕಾದರು. ಗುಂಡೆಸೆದರೂ ಆತ ತಪ್ಪಿಸಿಕೊಂಡ. ಮೂರನೇ ಬಾರಿ ಆತನ ಮನೆಗೇ ಧಾಳಿ ಇಟ್ಟು ಬಾಂಬ್ ಎಸೆದರು. ಜಮೀಂದಾರ, ಆತನ ಪತ್ನಿ, ಆತನ ಪುಟ್ಟ ಮಗು ಸತ್ತರು. ಮಗುವಿನ ಸಾವು ಕಾಂತ್ರಿಕಾರಿಗಳನ್ನು ದಿಕ್ಕೆಡಿಸಿತು.

ಪೋಲೀಸರು ನಿಧಾನವಾಗಿ ಕ್ರಾಂತಿಕಾರಿಗಳನ್ನು ಬೆನ್ನಟ್ಟಿದ್ದರು. ಅವರ ಗುಪ್ತ ನೆಲೆ ಪತ್ತೆ ಮಾಡಿದರು. ಕ್ರೂರ ಪೋಲೀಸ್ ಧಾಳಿಯಲ್ಲಿ ಮೂವತ್ತು ಜನ ಕ್ರಾಂತಿಕಾರಿಗಳು ಸತ್ತರು. ಈ ಇಬ್ಬರೂ ಆ ದಿನ ನಗರದಲ್ಲಿದ್ದ ಕಾರಣ ಉಳಿದುಕೊಂಡರು. ಈ ಇಬ್ಬರ ಮೇಲೆ ಕೇಸು ಹಾಕಲಾಯಿತು. ಸಾಕ್ಷಿ ಯಾರೂ ಸಿಕ್ಕದೇ ಬಿಡುಗಡೆ ಹೊಂದಿದರು.

* * *

೧೯೬೨ ರಲ್ಲಿ ನನಗರ್ಥವಾಗದೇ ಇದ್ದದ್ದು – ಈ ದೇಶ ಎಷ್ಟರ ಮಟ್ಟಿಗೆ ಪುನಃನಿರ್ಮಿತವಾಗಿದೆ ಎಂಬುದು. ತನ್ನದೇ ಆದ ಅಂಧಕಾರ ಯುಗದ ಬಳಿಕ, ಉತ್ತರ ಭಾರತದ ಸತತ ಸುಲಿಗೆಕೋರತನದ ಬಳಿಕ, ಕದಲುತ್ತಿದ್ದ ಸಾಮ್ರಾಜ್ಯಗಳು, ಯುದ್ಧ

ಗಳು, ೧೮ ನೇ ಶತಮಾನದ ಅರಾಜಕತೆ – ಇವೆಲ್ಲವುಗಳ ಬಳಿಕ ಈ ದೇಶ ಮತ್ತೆ ಪುನರುಜ್ಜೀವನ ಗೊಳ್ಳುತ್ತಿದೆ. ಇದಕ್ಕೆ ಸಾಕಷ್ಟು ಕಾಲ ತಗುಲಿದೆ. ರಾಮ ಮೋಹನ್‌ರಾಯ್‌ರನ್ನು ಸೃಷ್ಟಿಸೋದಕ್ಕೆ ಅದೆಷ್ಟೋ ಕಾಲ ಬೇಕಾಯಿತು. ಗಾಂಧಿ ಸೃಷ್ಟಿಯಾಗೋದಕ್ಕೆ ಮತ್ತೂ ಹೆಚ್ಚು. ೧೮೫೭ ರ ಬಳಿಕದ ಶಾಂತಿ ಸಂದರ್ಭದಲ್ಲಿ ಅದೃಷ್ಟವೆನ್ನಬೇಕು. ಬೌದ್ಧಿಕ ತರಬೇತಿಯ ಕಾಲ ಅದು. ಹೊಸ ರೀತಿಯ ಬೌದ್ಧಿಕ ಬದುಕಿನ ದಾರಿಗೆ ಭಾರತ ಅಡಿಯಿಟ್ಟಿತು. ಸ್ವಾತಂತ್ರ್ಯ ಹೋರಾಟ ಈ ಎಲ್ಲ ಬೌದ್ಧಿಕ ಸ್ತರಗಳನ್ನು ಪ್ರತಿಬಿಂಬಿಸಿತು. ಆದ್ದರಿಂದಲೇ ಈ ಸ್ವಾತಂತ್ರ್ಯ ನಿಜವಾದ ಅರ್ಥದ ಸ್ವಾತಂತ್ರ್ಯ.

ಸಿಪಾಯಿ ದಂಗೆಯ ಬಳಿಕದ ೧೩೦ ವರ್ಷಗಳಲ್ಲಿ ಸ್ವಾತಂತ್ರ್ಯದ ಕಲ್ಪನೆ ದೇಶದ ಮೂಲೆ ಮೂಲೆಗೂ ಹಬ್ಬಿದೆ. ಸ್ವಾತಂತ್ರ್ಯ ದಕ್ಕಿದ್ದು ಸುಮಾರಾಗಿ ಮೇಲ್‌ಸ್ತರದ ಧುರೀಣರಿಂದಲೇ. ಆದರೆ ಇಂದು ಈ ಸ್ವಾತಂತ್ರ್ಯ ಆಳಕ್ಕಿಳಿಯುತ್ತಿದೆ. ಜನಗಳಿಗೆ ತಾವು ಯಾರು, ತಮ್ಮ ಋಣ, ಹಕ್ಕು ಬಾಧ್ಯತೆಗಳೇನು ಎಂಬ ಕಲ್ಪನೆ ಇದೆ. ಸ್ವಾತಂತ್ರ್ಯಾನಂತರದ ಆರ್ಥಿಕ ಪ್ರಗತಿ ಇದಕ್ಕೆ ಪೂರಕವಾಯಿತು. ಆತ್ಮದ ಬಿಡುಗಡೆ ಕೇವಲ ಬಿಡುಗಡೆಯಾಗೇ ಬಂದಿಲ್ಲ. ನಿರಾಸೆ, ಕ್ರೌರ್ಯಗಳ ಸ್ತರಗಳುಳ್ಳ ಭಾರತದಲ್ಲಿ ಅದು ಗಲಭೆಯಾಗಿ ಪ್ರಕಾಶಗೊಳ್ಳುತ್ತಿದೆ. ಅದು ಸಿಟ್ಟು, ದಂಗೆಗಳಾಗಿ ಒದಗಿ ಬಂದಿದೆ. ಇಂದು ಈ ದೇಶ ಲಕ್ಷಾಂತರ ಪುಟ್ಟ ದಂಗೆಗಳ ದೇಶವಾಗಿದೆ.

ಈ ಲಕ್ಷ ದಂಗೆಗಳಿಗೆ ಕೋಮು ಅತಿರೇಕ, ಧಾರ್ಮಿಕ ಅತಿರೇಕ, ಪ್ರಾದೇಶಿಕ ಅತಿರೇಕಗಳು ಸಹಾಯಮಾಡಿವೆ. ಹೊಸ ಅರಿವು, ಬೌದ್ಧಿಕ ಬದುಕಿನ ಆರಂಭಗಳೆಲ್ಲ ಅರಾಜಕತೆ ಅವ್ಯವಸ್ಥೆಗಳಿಂದ ನಾಶಗೊಂಡಂತೆ ಕಾಣಬಹುದು. ಆದರೆ ೨೦೦ ವರ್ಷಗಳ ಹಿಂದೆ ಕಾಣಿಸದಿದ್ದುದು ಇಂದು ಭಾರತದಲ್ಲಿದೆ. ಒಂದು ಕೇಂದ್ರ ಇಚ್ಛಾ ಬಲ, ಕೇಂದ್ರ ಬೌದ್ಧಿಕ ಬಲ, ಒಂದು ರಾಷ್ಟ್ರೀಯ ಕಲ್ಪನೆ. ಭಾರತದ ಒಕ್ಕೂಟ ಇವೆಲ್ಲ ಅದರ ಅಂಗ ರಾಜ್ಯಗಳಿಗಿಂತ ದೊಡ್ಡದು. ಇಲ್ಲಿನ ಹಲವು ಚಳುವಳಿಗಳೂ ಭಾರತೀಯ ರಾಜ್ಯಶಕ್ತಿಯನ್ನು ಬಲಪಡಿಸಿದೆ. ಕಾನೂನು, ನಾಗರಿಕ ನ್ಯಾಯಗಳ ಮೂಲ ಈ ರಾಜ್ಯಶಕ್ತಿ ಎಂದು ನಿರ್ವಚಿಸಲ್ಪಟ್ಟಿದೆ.

ಅತಿರೇಕವನ್ನು ಇಂದು ಜನ ಗುರುತಿಸುತ್ತಿದ್ದಾರೆ. ಒಟ್ಟಾರೆ ಬೌದ್ಧಿಕ ಶಕ್ತಿ ಮತ್ತು ಮಾನವೀಯ ಮೌಲ್ಯಗಳ ಕಡೆಗೆ ಗಮನ ನೀಡಲು ಈ ದಂಗೆಗಳು ಸಹಾಯ ಮಾಡಿವೆ. ಈ ಲಕ್ಷಾಂತರ ದಂಗೆಗಳು ಇರಬಾರದಾಗಿತ್ತು ಎಂದು ಭಾವಿಸಬಾರದು. ಈ ದೇಶದ ಕೋಟಿಗಟ್ಟಲೆ ಜನರಿಗೆ ಹೊಸ ಆರಂಭದ ಹೆಜ್ಜೆ ಅದು. ದೇಶದ ಪುನರುಜ್ಜೀವನದ ಕಷ್ಟದ ದಾರಿಯ ಗುರುತು ಕೂಡಾ. ★

ಪ್ರಪಂಚದ ವ್ಯವಸ್ಥಾಪಕರೇ, ದಯಮಾಡಿ ದೂರ ಸರಿಯಿರಿ!

—ವಿನೋಬಾ

ಯುದ್ಧದಲ್ಲಿ ಅಮೇರಿಕಾ ತೊಡಗಿದಾಗಿನಿಂದ ಈ ಯುದ್ಧ ಇನ್ನು ಮನುಷ್ಯನ ಕೈಯಲ್ಲುಳಿದಿಲ್ಲ, ಮಾನವನೇ ಯುದ್ಧದ ಕೈಯಲ್ಲಿ ಸಿಕ್ಕಿಕೊಂಡಿದ್ದಾನೆ ಎಂಬ ನಂಬಿಕೆ ಉಂಟಾಗಿದೆ. ಆದರೆ ನನ್ನ ವಿಚಾರದ ಮೇರೆಗೆ ಈ ಹತ್ಯಾಕಾಂಡದಲ್ಲಿ ಸಾಮಾನ್ಯ ಜನರನ್ನು ನಿಷ್ಕಾರಣವಾಗಿ ಎಳೆಯಲಾಗುತ್ತಿದೆ ಎಂಬುದು ಅತ್ಯಂತ ಭಯಾನಕ. ಯಾರದು ಯುದ್ಧದೊಂದಿಗೆ ಯಾವ ಸಂಬಂಧವೂ ಇಲ್ಲವೋ ಅಂಥವರ ರಕ್ತವನ್ನು ಹರಿಸಲಾಗುತ್ತಿದೆ; ಯುದ್ಧದ ಹೆಸರಿನಲ್ಲಿ ಬೇರೆ ಜನರ ರಕ್ತವನ್ನು ಚೆಲ್ಲಲಾಗುತ್ತಿದೆ. ಇದೆಲ್ಲವೂ ವ್ಯವಸ್ಥಾಪಕರ ಕಾರಸ್ಥಾನ! ಅದರಲ್ಲಿ ಸಾಮಾನ್ಯ ಜನರಿಗೆ ಯಾವ ಲಾಭವೂ ಇಲ್ಲ. ಆದ್ದರಿಂದ "ಇನ್ನು ನೀವು ವ್ಯವಸ್ಥೆ ಬಿಟ್ಟುಬಿಡಿ, ಆಗಲೇ ನಾವು ಸುಖಿ" ಎಂದು ಪ್ರಪಂಚದ ಎಲ್ಲಾ ವ್ಯವಸ್ಥಾಪಕರಿಗೆ ನಾನು ಹೇಳುತ್ತಿರುವುದು. ನೀವು ಕೂಡ ನಿಮ್ಮಲ್ಲಿಯ ವ್ಯವಸ್ಥಾಪಕರನ್ನು ಪ್ರಾರ್ಥಿಸಿ. ಅಮೇರಿಕಾ, ಇಂಗ್ಲೆಂಡ್, ಜಪಾನ್, ಜರ್ಮನಿ ತಮ್ಮ-ತಮ್ಮ ವ್ಯವಸ್ಥಾಪಕರೊಂದಿಗೆ ವಿನಂತಿ ಮಾಡಿಕೊಳ್ಳಲಿ. ಅಲ್ಲಿಯ ಜನರಿಗೆ ಯಾವಾಗ ಅರ್ಥವಾಗುವುದೋ ಗೊತ್ತಿಲ್ಲ. ಕೊನೆಯ ಪಕ್ಷ ನಾವಾದರೂ ಪ್ರಾರಂಭಿಸೋಣ. "ನೀವು ಇದುವರೆಗೆ ಬೇಕಾದಷ್ಟು ಪ್ರಯೋಗ ಮಾಡಿದ್ದೀರಿ. ಇನ್ನು ಸಾಕು ಮಾಡಿ" ಎಂದು ನಾವು ಅವರಿಗೆ ಹೇಳೋಣ. ಅತ್ಯಂತ ಹೆಚ್ಚಿನ ಅವ್ಯವಸ್ಥೆಯನ್ನು, ಪೀಡೆಯನ್ನು ವ್ಯವಸ್ಥಾಪಕ ವರ್ಗವೇ ಕೊಟ್ಟಿದೆ. ಆದ್ದರಿಂದ ಈಗ ದಯಮಾಡಿ ವ್ಯವಸ್ಥಾಪಕರು ದೂರ ಸರಿದರೆ ನಮಗೆ ಹೆಚ್ಚು ಶಕ್ತಿ ಬಂದೀತು, ದುಃಖ ನಿವಾರಣೆಯಾದೀತು, ಸುಖ ಸಿಕ್ಕೀತು.

ನಿಮ್ಮ ವ್ಯವಸ್ಥೆಗಾಗಿ ನಮ್ಮ ಅಗತ್ಯ ಇದೆ ಎಂದು ವ್ಯವಸ್ಥಾಪಕ ವರ್ಗ ಹೇಳುತ್ತದೆ. ನಮ್ಮ ಯಾವ ಆವಶ್ಯಕತೆಗಳನ್ನು ನೀವು ನೆರವೇರಿಸುತ್ತೀರಿ ಎಂಬುದು ಅವರಿಗೆ ನನ್ನ ಮರುಪ್ರಶ್ನೆ. ನಮಗೆ ಹಸಿವಾಗುತ್ತದೆ, ದೇವರು ಕೊಟ್ಟ

ಭೂಮಿಯಲ್ಲಿ ಬೇಸಾಯ ಮಾಡುತ್ತೇವೆ. ವ್ಯವಸ್ಥಾಪಕ ವರ್ಗ ಬೇಸಾಯ ಮಾಡೀತೆ? ಆದ್ದರಿಂದ ನಮ್ಮ ಹಸಿವನ್ನು ಹೋಗಲಾಡಿಸಲು ವ್ಯವಸ್ಥಾಪಕರ ಯಾವ ಅಗತ್ಯತೆಯೂ ಇಲ್ಲ. ಮಳೆಯಾಗುತ್ತದೆ. ಜಲಾಶಯಗಳಲ್ಲಿ ನೀರು ತುಂಬುತ್ತದೆ. ಆಗ ಬಾಯಾರಿಕೆ ಹೋಗಲಾಡಿಸಲು ಅವರ ಅವಶ್ಯಕತೆ ಇಲ್ಲ. ಗಾಳಿಗೋಸ್ಕರ ಕೂಡ ಅವರ ಅಗತ್ಯತೆ ಇಲ್ಲ. ಏಕೆಂದರೆ ದೇವರು ಪ್ರತಿಯೊಬ್ಬರಿಗೂ ಒಂದೊಂದು ಮೂಗನ್ನು ಕೊಟ್ಟಿದ್ದಾನೆ. ಪರಸ್ಪರರಲ್ಲಿಯ ವ್ಯವಹಾರದ ಬಗ್ಗೆಯೂ ಕೂಡ ಇದೇ ಮಾತು ಅನ್ವಯಿಸುತ್ತದೆ. ನೀತಿಶಾಸ್ತ್ರದ ಅನುಗುಣವಾಗಿ ನಾವು ವಿವಾಹ ಮಾಡಿಕೊಂಡು ಕುಟುಂಬ ಸಂಸ್ಥೆಯನ್ನು ರಚಿಸಲು ಕಲಿತಿದ್ದೇವೆ. ಸಂತರು ನಮಗೆ ನೆರೆಹೊರೆಯವರನ್ನು ಪ್ರೀತಿಸಲು ಕಲಿಸಿದ್ದಾರೆ. ಈ ಪ್ರಕಾರ ನಮ್ಮ ಅಗತ್ಯತೆಗಳು ಪೂರ್ಣಗೊಳ್ಳುತ್ತವೆ. ಶಿಕ್ಷಣಕ್ಕಾಗಿ ಕೂಡ ವ್ಯವಸ್ಥಾಪಕ ವರ್ಗದ ಅವಶ್ಯಕತೆಇಲ್ಲ. ಮಗು ಆಕಾಶದಿಂದೇನೂ ಬೀಳುವುದಿಲ್ಲ. ಹುಟ್ಟುತ್ತಲೆ ತಾಯಿಯ ಸ್ತನದಲ್ಲಿ ಅದಕ್ಕಾಗಿ ಹಾಲು ನಿರ್ಮಾಣವಾಗುತ್ತದೆ. ಈ ರೀತಿಯಾಗಿ ತಾಯಿಯಿಂದ ಅದಕ್ಕೆ ರಕ್ಷಣೆ ದೊರೆಯುತ್ತದೆ. ತಾಯಿಯೇ ಅದಕ್ಕೆ ಮಾತೃಭಾಷೆ ಕಲಿಸುತ್ತಾಳೆ. ತಂದೆ, ತಾಯಿ, ಗುರುಗಳಿಂದ ಅದಕ್ಕೆ ಉತ್ತಮ ಶಿಕ್ಷಣ ದೊರೆಯುತ್ತದೆ. ತಂದೆ-ತಾಯಿ ವ್ಯವಸ್ಥಾಪಕರ ಮೂಲಕ ದೊರೆಯುವುದಿಲ್ಲ. ಸಮಾಜದಲ್ಲಿ ಜ್ಞಾನಿಗಳು ಅಥವಾ ಗುರುಗಳು ಆಗುವುದೂ ಕೂಡ ರಾಜ್ಯ ವ್ಯವಸ್ಥೆಯ ಮೇಲೆ ನಿರ್ಭರವಾಗಿಲ್ಲ. ಅಕ್ಬರನ ರಾಜ್ಯವಿತ್ತು, ಅದಕ್ಕಾಗಿ ತುಳಸೀದಾಸನ ಜನ್ಮವಾಯಿತೆಂದೇನಲ್ಲ. ನಿಜವಾದ ಜ್ಞಾನಿಗಳು ಸ್ವಯಂಭೂ ಆಗಿರುತ್ತಾರೆ. ಸರ್ಕಾರವಾದರೋ ತನ್ನ ಶಿಕ್ಷಣ ಇಲಾಖೆಯ ಮೂಲಕ ಶಿಕ್ಷಣದ ಕಾರ್ಯದಲ್ಲಿ ತೊಂದರೆಯನ್ನೇ ಉಂಟುಮಾಡುತ್ತದೆ. ಶಿಕ್ಷಣದ ಕ್ಷೇತ್ರದಲ್ಲಿ ಎಷ್ಟೊಂದು ಹೊಸ ಹೊಸ ಶೋಧಗಳು ಪ್ರಯೋಗಗಳಾಗಿವೆಯೋ ಅವೆಲ್ಲವೂ ಸರ್ಕಾರೇತರ ಕ್ಷೇತ್ರದಲ್ಲಿಯೇ ಆಗಿವೆ. ಕೊನೆಯಲ್ಲಿ ಅವರು ನಾವು ನಿಮಗೆ ರಕ್ಷಣೆಯನ್ನು ಮಾಡುತ್ತೇವೆ ಎನ್ನುತ್ತಾರೆ. ಯಾರಿಂದ ರಕ್ಷಣೆ ಮಾಡುತ್ತಾರೆ? ಪರಕೀಯರ ಆಕ್ರಮಣದಿಂದ. ಆದರೆ ಪರಕೀಯರು ನಮ್ಮ ಮೇಲೆ ಆಕ್ರಮಣವನ್ನಾದರೂ ಏಕೆ ಮಾಡುತ್ತಾರೆ? ಪರಕೀಯರ ಆಕ್ರಮಣದ ಈ ಭೂತವನ್ನು ವ್ಯವಸ್ಥಾಪಕರೇ ಉಂಟುಮಾಡಿದ್ದಾರೆ. ಒಂದು ವೇಳೆ ಅವರು ದೂರ ಸರಿದರೆ ಆಗ ಅದು ತನ್ನ ಪಾಡಿಗೆ ತಾನು ಹೊರಟುಹೋಗುವುದು. ಯಾವುದೇ ದೇಶದ ಸಾಮಾನ್ಯ ಜನರು ಇನ್ನೊಂದು ದೇಶದ ಸಾಮಾನ್ಯ ಜನರ ಮೇಲೆ ಧಾಳಿ ಮಾಡಲಾರರು. ಇಂದಂತೂ ಇಡೀ ವಿಶ್ವವೇ ಯುದ್ಧದ ಪಡೆಯಾಗಿ ಬಿಟ್ಟಿದೆ. ಈ ರಕ್ಷಣೆಯ ಪ್ರಶ್ನೆಯೇ ದುಷ್ಟ ಚಕ್ರವಾಗಿದೆ. ಈ ಭ್ರಮೆ ವ್ಯವಸ್ಥಾಪಕರಿಂದಲೇ ಉಂಟಾಗಿರುವುದು. ಈ ನೆಪದಲ್ಲಿ ಅವರು ತಮ್ಮ ಅಸ್ತಿತ್ವವನ್ನು ನಮ್ಮ ಮೇಲೆ ಹೊರಿಸುವ ಪ್ರಯತ್ನ ಮಾಡುತ್ತಾರೆ. ಬೇರೆಯವರ ಆಕ್ರಮಣದಿಂದ ನಮ್ಮನ್ನು ರಕ್ಷಿಸಲು ತಮ್ಮ ಅಗತ್ಯತೆ ಇದೆ ಎಂದು ಹೇಳುತ್ತಾರೆ. ಆದರೆ ವ್ಯವಸ್ಥಾಪಕರ

೧೨ ನೇ ಪುಟ ನೋಡಿ

ವಿಷ; ಅಮೃತ

—ವಿನಾಯಕ

[ಪ್ರೊ॥ ವಿ. ಕೃ ಗೋಕಾಕರ ಈ ಕವನ ೧೯೪೯ ರಲ್ಲಿ ಬರೆದದ್ದು. ಕವನದಲ್ಲಿ ಮೂಡಿ ಬಂದಿರವ ವಿಚಾರಗಳು ಇಂದಿಗೂ ಅಂದರೆ ಇತ್ತೀಚೆಗೆ ತಾನೆ ಮುಗಿದ ಕೊಲ್ಲಿಯುದ್ಧದ ತರುವಾಯ ಹಾಗೂ ನಮ್ಮ ದೇಶದ ಇಂದಿನ ರಾಜಕೀಯ ಅನಿಶ್ಚಿತತೆಯ ಸಂದರ್ಭದಲ್ಲಿ ಪ್ರಸ್ತುತವಾಗಿವೆ ಮತ್ತು ಎಲ್ಲರ ಮನಸ್ಸಿನಲ್ಲಿಯ ಭಾವನೆಗೆ ಸ್ಪಂದಿಸುತ್ತವೆ. –ಸಂ]

ಅಲ್ಲಿ ವಿಷ,
ಇಲ್ಲಿ ವಿಷ,
ಎಲ್ಲೆಡೆಗೂ ಆಮಿಷ,
ರಾಗ, ದ್ವೇಷ, ಕಿಲ್ಮಿಷ !
ಪೃಥ್ವಿಗೆ ನಂಜೇರಿದಂತೆ
ಮನುಕುಲ ಸಿಡಿಲ್ ನುಂಗಿದಂತೆ
ಹೃದಯದಲ್ಲಿ ತಳಮಳ,
ಉದರದಲ್ಲಿ ಮಳಮಳ.
ಎಲ್ಲಿ ಸುರುಳಿ ಸುತ್ತಿ ಹೋಯ್ತೊ,
ಸ್ವರ್ಣ ಯುಗದ ಹೊಂಗನಸದು ?
ಪಾತಾಳವ ಕಂಡುದಾಯ್ತೊ,
ಪ್ರೀತಿ–ಸ್ನೇಹ–ಸೌರಭವದು ?
ಜ್ವಾಲಾಮುಖಿ
ಎತ್ತಿದ ಶಿಖಿ,
ಅನಾವೃಷ್ಟಿ
ಕೊಲುವ ಸೃಷ್ಟಿ,
ಕೈಯೆತ್ತುತ ಕ್ರಾಂತಿಯಾವುದನ್ನು ಕರೆಯುತಿರುವವು ?
ಆವಕೆ ಕಾವಲಾಗಿ ಯಾವ ಶಕ್ತಿ ನೆರೆಯುತಿರುವವು ?
ಜನವ ಜನ,
ಮನವ ಮನ,

ಹಂಗಿಸುತಿದೆ ದಿನ ದಿನ–
ಇದುವೆ ಬಾಳೊ ಮುಂದಿನ ?
ಮೃತ್ಯುವೆ ಕುಣಿದಾಡಿದಂತೆ
ಪ್ರಳಯುವೆ ಬಳಿಸಾರುವಂತೆ
ತಲೆಯುಲೆಲ್ಲ ರಣರಣ,
ಮನದಲೆಲ್ಲ ಭಣಭಣ.
ಬರುವ ಅಮೃತಕಾಗಿ ಕಾದು
ಪೃಥ್ವಿ ನಂಜು ನುಂಗುತಿಹಳು ;
ಹೊಸ ಹೊಂಚಿನ ಬರವನೆಣಿಸಿ
ಮುಳ್ಳ ಮೇಲೆ ತಂಗುತಿಹಳು
ನಮ್ಮ ಧ್ಯಾನ,—
ಅವಳ ಪ್ರಾಣ !
ಗೆಯ್ದು ಕೃತಿ,—
ನವೀನ ಸ್ಮೃತಿ !

ಅಗ್ನಿ ಕುಂಡವಿದೋ ! ಇದರಲಿ ತಾಳು, ಬಾಳು, ಜೀವವೆ !
ಬೆಂದು ನೊಂದು ಚಿನ್ನವಾಗು, ಘನ್ನವಾಗು, ಭಾವವೆ !

ಪ್ರಪಂಚದ ವ್ಯವಸ್ಥಾಪಕರೇ,........ ೧೧ ನೇ ಪುಟದಿಂದ

ಇರುವಿಕೆಯೇ ಆಕ್ರಮಣದ ಮೂಲವೆಂದು ನಾವು ಹೇಳುತ್ತೇವೆ. ನಮ್ಮ ರಕ್ಷಣೆಯ ಕಾರಣವನ್ನೊಡ್ಡಿ ಅವರು ಸೈನ್ಯ ಇಟ್ಟುಕೊಳ್ಳುತ್ತಾರೆ. ಆಕ್ರಮಣ ಯಾವಾಗ ಲಾದರೊಮ್ಮೆ ಆಗುತ್ತದೆ. ಆದರೆ ಸೇನೆಯನ್ನು ಪ್ರಾಯಶಃ ನಮ್ಮನ್ನು ಹತ್ತಿಕ್ಕಲು ಉಪಯೋಗಿಸಲಾಗುತ್ತದೆ.

ಇದು ರಕ್ಷಣೆಯ ಸರಿಯಾದ ಉಪಾಯವಲ್ಲ. ಒಂದೇ ಸರಿಯಾದ ಉತ್ತರ ವಿದೆ. ಅದೇನೆಂದರೆ ಜನರು ಬುದ್ಧಿಪೂರ್ವಕವಾಗಿ ಒಂದೆಡೆ ಸೇರಿ, ಶಾಂತಿ ಪೂರ್ವಕವಾಗಿ ತಮ್ಮ-ತಮ್ಮ ಕೆಲಸ ಮಾಡಬೇಕು, ಒಟ್ಟಿಗೆ ಇರಬೇಕು ಮತ್ತು ನೀವು ದೂರ ಸರಿಯಿರೆಂದು ವ್ಯವಸ್ಥಾಪಕರಿಗೆ ಹೇಳಬೇಕು. ಕನಿಷ್ಠ ಭಾರತದ ಮಟ್ಟಿ ಗಾದರೂ ಈಗ ಈ ಸಮಯ ಬಂದಿದೆ. ನಮ್ಮ ವ್ಯವಸ್ಥಾಪಕರನ್ನು ನಾವು ಈಗ ಕೂಡಲೇ ದೂರ ಸರಿಸಬೇಕು. ನಿಮ್ಮ ಸೈನ್ಯ, ಕೋರ್ಟು, ಟ್ಯಾಕ್ಸ್ ಮುಂತಾದವು ಗಳಿಂದ ನಮ್ಮ ಕೆಲಸ ಕೆಡುತ್ತದೆ. ಇವು ಇಲ್ಲದೆಂದು ನಮ್ಮ ಕೆಲಸವೇನೂ ನಿಲ್ಲುವುದಿಲ್ಲ. ಇಡೀ ಪ್ರಪಂಚದ ವ್ಯವಸ್ಥಾಪಕರು ಒಂದು ವೇಳೆ ತಮ್ಮ-ತಮ್ಮ ಸ್ಥಳದಿಂದ ದೂರ ಸರಿದಲ್ಲಿ ವಿಶ್ವದಲ್ಲಿ ಶಾಂತಿ ಉಂಟಾದೀತು ಮತ್ತು ಮಾನವತೆಯ ಕಲ್ಯಾಣವಾದೀತು.

(ವರ್ಧಾ : ೨೫–೫–೧೯೪೨)

ಅನುವಾದ : ಸುರೇಂದ್ರ ಕೌಲಗಿ

ಯುದ್ಧ ಮತ್ತು ರಾಜಕೀಯ ಮೌಲ್ಯಗಳು

ಕೆ. ಎಸ್. ನಾರಾಯಣಸ್ವಾಮಿ

ಮತ್ತೊಂದು ಘನ ಘೋರ ಯುದ್ಧ ಕೊನೆಗೊಂಡಿದೆ. ಎರಡನೇ ಮಹಾ ಯುದ್ಧದಿಂದೀಚೆಗೆ ನೂರಾರು ಯುದ್ಧಗಳಲ್ಲಿ ಆಗಿರುವ ಅಪಾರ ಹಾನಿ, ಬಳಕೆಯಾದ ಪ್ರಚಂಡ ಮಾರಕಾಸ್ತ್ರಗಳು, ಸಂಭವಿಸಿದ ಸಾವು ನೋವುಗಳು ಮಾನವ ಸಮಾಜದ ಯಾವ ಪ್ರಬಲ ಸಮಸ್ಯೆಯನ್ನೂ ನಿವಾರಿಸಿಲ್ಲ. ಬದಲಾಗಿ ರಾಷ್ಟ್ರ ರಾಷ್ಟ್ರಗಳ ನಡುವೆ ಪರಸ್ಪರ ಸಂಶಯ, ದ್ವೇಷ, ಅಸಮಾನ ಸ್ಪರ್ಧೆ ಮತ್ತು ಭರಿಸಲಾಗದ ಸೈನ್ಯವೆಚ್ಚ ವಿಚಾರಪರರನ್ನೆಲ್ಲ ತಲ್ಲಣಗೊಳಿಸಿದೆ. ಈಗಿನದಂತೂ ಅತ್ಯಂತ ಶ್ರೀಮಂತ ದೇಶಗಳ ನಡುವೆ ನಡೆದ ಮಾರಣ ಹೋಮ. ಇದೊಂದು ಆಧುನಿಕ ನಾಗರಿಕತೆಯ ದಾರುಣ ದುರಂತ; ಬರ್ಬರ ರಾಜಕಾರಣದ ಪರಿಣಾಮ; ಮಾನವೀಯ ಮೌಲ್ಯಗಳ ತಿರಸ್ಕಾರ; ಜಗತ್ತು ಈ ಯುದ್ಧಪ್ರಣೀತ ರಾಜಕಾರಣದಿಂದ ಮುಕ್ತವಾಗುವುದು ಸಾಧ್ಯವೇ? ನಾಳಿನ ಜಗತ್ತು ಅಹಿಂಸಾಮಯವಾಗಬಲ್ಲದೇ? ಶಸ್ತ್ರ ಶಕ್ತಿಯ ಪ್ರಾಬಲ್ಯವೇ ನ್ಯಾಯ ಅನ್ಯಾಯಗಳನ್ನು ತೀರ್ಮಾನಿಸುತ್ತ ಶ್ರೀಮಂತ ರಾಷ್ಟ್ರಗಳು ಮಾರಕಾಸ್ತ್ರಗಳನ್ನು ಹೆಚ್ಚು ಹೆಚ್ಚು ಪ್ರಬಲಗೊಳಿಸಲು ಸಂಪತ್ಸಾಧನಗಳನ್ನೂ ವಿಜ್ಞಾನ ತಂತ್ರಜ್ಞಾನಗಳನ್ನೂ ದುರ್ವಿನಿಯೋಗ ಮಾಡುತ್ತ, ವಿಶ್ವಸಂಸ್ಥೆಯನ್ನು ದುರ್ಬಲಗೊಳಿಸುತ್ತಾ ಸಾಗಿದರೆ ಅಸಂಖ್ಯಾತ ಸಾಮಾನ್ಯ ಪ್ರಜೆಗಳ ಬದುಕು ಅಸಹನೀಯವಾಗುತ್ತದೆ. ಜೀವಿಸುವ ಪರಿಸರ ಕಲುಷಿತವಾಗುತ್ತದೆ. ಇದನ್ನು ತಡೆಗಟ್ಟಿ ಭಯೋತ್ಪಾದಕ ರಾಜ್ಯಶಕ್ತಿಗಳನ್ನು ನಿಯಂತ್ರಿಸಿ, ಶಾಂತಿಯುತ ಮಾರ್ಗಗಳಿಂದ ಮಾನವ ಕುಲದ ನೆಮ್ಮದಿಯನ್ನು ಸಾಧಿಸುವ ಮಾರ್ಗಗಳಿಗಾಗಿ ಎಲ್ಲ ರಾಷ್ಟ್ರಗಳಲ್ಲಿಯೂ ಸಂವೇದನಾಶೀಲ ವಿಚಾರವಂತರು ನಿರಂತರವಾಗಿ ಶೋಧನೆ ನಡೆಸುತ್ತಲೇ ಇದ್ದಾರೆ.

ಎರಡನೇ ಮಹಾಯುದ್ಧದಲ್ಲಿ ಪ್ರಯೋಗಿಸಿದ ಅಣುಬಾಂಬು ಮಾನವ ಕುಲವನ್ನು ಎಚ್ಚರಿಸಿತು. ಭೂಮಿಯ ಮೇಲೆ ಎಂತಹ ನರಕಸದೃಶ ಬಾಳನ್ನು ನಾವು ನಾಗರಿಕತೆಯೆಂದು ಭ್ರಮಿಸಿ ಸರ್ವನಾಶದ ಕಡೆಗೆ ಸಾಗುತ್ತಿದ್ದೇವೆ ಎಂಬ ಅರಿವು

ವಿಜ್ಞಾನಿಗಳಲ್ಲೂ ಧ್ವನಿಸಿತ್ತು. ಆ ಸಂದರ್ಭದಲ್ಲಿ ಯುದ್ಧ ಮತ್ತು ಶಾಂತಿಗಳ ಜಿಜ್ಞಾಸೆಮಾಡುತ್ತ ಆಲ್ಬರ್ಟ್ ಐನ್‌ಸ್ಟೀನ್ ಹೀಗೆ ಬರೆದರು:–

"ಯುದ್ಧದ ಬಡಬಾಗ್ನಿಯಿಂದ ಹೊರಬರಲು ನಾವು ನಮ್ಮ ಶತೃಗಳ ನಿಕೃಷ್ಟ ಅನೈತಿಕ ಮೌಲ್ಯಗಳನ್ನೇ ಅಂಗೀಕರಿಸಿ ಅಧಃಪತನ ಹೊಂದಿದ್ದೇವೆ. ಆ ಮೌಲ್ಯ ಪತನದಿಂದ ವಿಮೋಚನೆಹೊಂದಿ ಮಾನವತ್ವದ ಪವಿತ್ರ ಮೇಲ್ಮಟ್ಟಕ್ಕೆ ಜಗತ್ತನ್ನು ಕೊಂಡೊಯ್ಯುವ ಕರ್ತವ್ಯದಿಂದ ವಿಮುಖರಾಗಿದ್ದೇವೆ. ನೀತಿ ಶೂನ್ಯವಾದ ಅದೇ ಪತನದ ಮಾರ್ಗಗಳನ್ನೇ ಮುಂದುವರಿಸಿ ಅದನ್ನು ಮತ್ತಷ್ಟು ಗಾಢವಾಗಿ ಅಂಗೀಕರಿಸುತ್ತಿದ್ದೇವೆ. ಯಾವುದನ್ನು ಅನ್ಯಾಯಗಳೆಂದು ಬಗೆದು ಪ್ರತಿಭಟಿಸಿ ಎದುರಿಸಿದೆವೆಂದು ಸಾರಿದೆವೋ ಅದನ್ನೇ ನಮ್ಮ ಗುರಿ ಎಂದು ನಾವೇ ಅಂಗೀಕರಿಸಿ ಉದ್ದೇಶ ಪೂರ್ವಕವಾಗಿಯೇ ಮತ್ತೊಂದು ಸರ್ವನಾಶಕ ಯುದ್ಧದೆಡೆಗೆ ಸಾಗಿದ್ದೇವೆ."

ಈಗ ನಲವತ್ತು ವರ್ಷಗಳ ಇತಿಹಾಸ ಹಾಗೆಯೇ ಉರುಳಿದೆ. ಜರ್ಮನಿ–ಜಪಾನ್ ರಾಷ್ಟ್ರಗಳ ಘೋರ ಪತನದ ನಂತರ ಎರಡು ಪರಸ್ಪರ ವಿರೋಧೀ ಸಿದ್ಧಾಂತಗಳ ಪ್ರತಿನಿಧಿಗಳೆಂದು ಸಾಮ್ರಾಜ್ಯಗಳನ್ನು ಕಟ್ಟುವ ಮಹತ್ವಾಕಾಂಕ್ಷೆಯಿಂದ ಅಮೆರಿಕ ಮತ್ತು ರಷ್ಯ ನಾಲ್ಕು ದಶಕಗಳ ಕಾಲ ಯುದ್ಧ ಭಯದ ಅಂಚಿನಲ್ಲೇ ಜಗತ್ತನ್ನು ನಡೆಸಿಕೊಂಡಿತು. ರಾಜಕೀಯ ಸ್ವಾತಂತ್ರ್ಯ ನೂರಾರು ಸಣ್ಣ ಮತ್ತು ಹಿಂದುಳಿದ ರಾಷ್ಟ್ರಗಳಿಗೆ ಲಭಿಸಿದರೂ ಆರ್ಥಿಕ ದಾಸ್ಯ ಮತ್ತು ಶಕ್ತಿಯುತ ಬಣಗಳ ಅವಲಂಬನೆಯಿಂದ ಉದಾತ್ತ ಮೌಲ್ಯಗಳು ನಾಶವಾಗತೊಡಗಿದವು. ಯುದ್ಧಗಳನ್ನು ಅವಲಂಬಿಸದೆ ನೇರವಾಗಿ ಶಾಂತಿಯುತ ವಿಚಾರ ವಿನಿಮಯದಿಂದ ಅಂತರ್ರಾಷ್ಟ್ರೀಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ವಿಶ್ವಸಂಸ್ಥೆ ಸತತವಾಗಿ ಪ್ರಯತ್ನಿಸುತ್ತಿದ್ದರೂ ಯುದ್ಧಗಳು ಅನಿವಾರ್ಯವೆಂದೇ ರಾಜನೀತಿ ಧುರೀಣರು ವಾದಿಸತೊಡಗಿದರು. ಅಂತರ್ರಾಷ್ಟ್ರೀಯ ಘರ್ಷಣೆಗಳಲ್ಲಿ ಪ್ರವೇಶಿಸಿ ಶಸ್ತ್ರ ಬಲ ಪ್ರಯೋಗವನ್ನು ತಡೆಗಟ್ಟಲು ವಿಶ್ವ ಸಂಸ್ಥೆ ಪ್ರಬಲ ಅಂಗವಾದ ರಕ್ಷಣಾ ಸಮಿತಿ (ಸೆಕ್ಯೂರಿಟಿ ಕೌನ್ಸಿಲ್) ಒಂದಲ್ಲ ಒಂದು ಬಣದ ಆಗ್ರಹಕ್ಕೆ ತುತ್ತಾಗಿ ನಿಷ್ಕ್ರಿಯವಾಗತೊಡಗಿತು. ಸ್ಥಾಪಕ ಸದಸ್ಯ ರಾಷ್ಟ್ರಗಳಾದ ಅಮೇರಿಕ, ರಷ್ಯ, ಬ್ರಿಟನ್, ಫ್ರಾನ್ಸ್ ಮತ್ತು ಚೀಣಾಗಳಲ್ಲಿ ಯಾವುದೇ ಒಂದು ರಾಷ್ಟ್ರ ನಿಷೇಧಿಸಿದರೂ ಆ ಸಮಿತಿ ನಿರ್ಣಯ ಮಾಡಲಾಗದು ಎಂಬ ಸೂತ್ರದಿಂದ ಅನೇಕ ಆಕ್ರಮಣ ಯುದ್ಧಗಳಿಗೆ ಅವಕಾಶವಾಯಿತು. ಸಮಾನತೆಯ ಮೌಲ್ಯ ನಾಶವಾಗಿ ನ್ಯಾಯ ನಿರ್ಣಯದಲ್ಲಿ ಪ್ರಬಲ ರಾಷ್ಟ್ರ ಬಣಗಳ ರಾಜಕೀಯ ಪ್ರಾಬಲ್ಯದ ಸ್ಪರ್ಧೆಗೆ ವಿಶ್ವಸಂಸ್ಥೆ ಮಣೆಯು ಬೇಕಾಯಿತು.

ಸಮಾಜವಾದೀ ಕ್ರಾಂತಿಯನ್ನು ಈ ಶತಮಾನದ ಅತ್ಯಂತ ಮೌಲಿಕ ಎಂದು ಪರಿಗಣಿಸಲಾಗಿತ್ತು. ಸಾಮ್ಯವಾದೀ ರಾಷ್ಟ್ರಗಳು ಔದ್ಯೋಗಿಕ ಪರಿವರ್ತನೆ ನಾಗರಿಕತೆಯ ಸ್ಪರ್ಧೆಯಲ್ಲಿ ಪಾಶ್ಚಾತ್ಯ ಬಂಡವಾಳಶಾಹೀ ದೇಶಗಳಿಗೆ

ಪ್ರಬಲ ಪ್ರತಿಸ್ಪರ್ಧಿಗಳಾಗಿ ನಿಂತವು. ಪರಿಣಾಮವಾಗಿ ಒಂದು ತೀವ್ರತಮ ಶಸ್ತ್ರ ಉತ್ಪಾದನೆಯ ಪೈಪೋಟಿಯಲ್ಲಿ ರಷ್ಯ ಅದ್ಭುತ ಮುನ್ನಡೆ ಸಾಧಿಸಲು ರಾಜಕಾರಣ ಮೌಲ್ಯಗಳೆಲ್ಲ ಸಮಾಜವಾದೀ ತರ್ಕದ ಸಮಾನತೆ ಸಾಧಿಸಲು ಸರ್ವಾಧಿಕಾರೀ ಪ್ರವೃತ್ತಿಗಳಿಗೆ ಶರಣು ಹೋದವು. ಪ್ರಜಾಪ್ರಭುತ್ವವಾದೀ ಎನಿಸಿಕೊಂಡ ಬಂಡವಾಳಶಾಹಿ ಪ್ರಭುತ್ವವಾಗಲೀ ಸಮಾಜವಾದೀ ಎನಿಸಿಕೊಂಡ ಸೈನ್ಯಾಡಳಿತ ಏಕ ಪಕ್ಷ ಪ್ರಭುತ್ವವಾಗಲೀ ಸಾಮಾನ್ಯ ಪ್ರಜೆಗೆ ದೂರವಾಗಿ ನಿಂತು ಅವರನ್ನು ಒಂದು ಬೃಹದ್ ಪ್ರಮಾಣದ ಆರ್ಥಿಕ–ರಾಜಕೀಯ ಜಾಲದ ನಿಸ್ಸಹಾಯಕ ದುಡಿಮೆಗಾರರನ್ನಾಗಿ ಪರಿವರ್ತಿಸಿ ಬಿಟ್ಟವು. ಸಮಾಜದ ತಳಪದಿಯಲ್ಲಿ ಬಡತನ, ನಿಸ್ಸಹಾಯಕತೆ, ನಿರಾಶೆ ಮತ್ತು ದಬ್ಬಾಳಿಕೆಗಳ ಕಾರಣವಾಗಿ ಅಶಾಂತಿ, ಕ್ರೋಧ ಮತ್ತು ಹಿಂಸಾಚಾರಗಳು ಹೊಗೆಯಾಡತೊಡಗಿದವು. ರಾಜಕೀಯ ಕ್ಷೇತ್ರ ಜಡವಾಗಿ ಯಾಂತ್ರಿಕವಾಗಿ ಜನತೆಯ ಜೀವನ ನಿಯಂತ್ರಣವನ್ನೆಲ್ಲ ತನ್ನಲ್ಲಿ ಕೇಂದ್ರೀಕರಿಸಿಕೊಂಡು ಪ್ರಜಾತಂತ್ರ ವ್ಯವಸ್ಥೆಯನ್ನೇ ಅಪಭ್ರಂಶಗೊಳಿಸಿತು. ಒಂದೊಂದು ರಾಜ್ಯನೀತಿ ಪದ್ಧತಿಯೂ ಪ್ರಜಾಸಮುದಾಯದ ಔಪಚಾರಿಕ ಸಮ್ಮತಿ ಪಡೆದುಕೊಳ್ಳಲು ಪಕ್ಷ ರಾಜಕೀಯ, ಸಂಸದೀಯ ಸಂಪ್ರದಾಯಗಳು, ಚುನಾವಣಾ ವ್ಯವಸ್ಥೆಗಳಲ್ಲೆಲ್ಲ ಹಣ ಮತ್ತು ಅಧಿಕಾರದ ಪ್ರಭಾವವನ್ನು ನಂಬಿ ಭ್ರಷ್ಟ ಮಾರ್ಗಗಳನ್ನೇ ಅಂಗೀಕರಿಸಿ ನಡೆಯಿತು. ಸಮಾಜವಾದಿಗಳಾಗಲೀ ಸಾಮ್ಯವಾದಿಗಳಾಗಲೀ ಈ ಅನೈತಿಕ ಮಾರ್ಗಗಳನ್ನು ಪ್ರತಿಭಟಿಸಿ, ಪರಿತ್ಯಜಿಸಿ ನಿಜವಾದ ಪ್ರಜಾಧಿಕಾರ ನೆಲೆಗೊಳ್ಳಲು ಯಾವ ಪ್ರಯತ್ನವನ್ನೂ ಮಾಡಲೇ ಇಲ್ಲ. ಸಾಮ್ಯವಾದೀ ಕ್ರಾಂತಿಗಳಿಂದ ಸುಸಂಘಟಿತ ಯಂತ್ರೋದ್ಯಮಗಳಲ್ಲಿನ ದುಡಿಮೆಗಾರ ವರ್ಗ ಸ್ವಾರ್ಥಹಿತಗಳನ್ನು ರಕ್ಷಿಸಿಕೊಂಡು ತಾನೇ ಒಂದು ಪ್ರಬಲ ಶೋಷಕ ಬಣವಾಗಿ ಬಿಟ್ಟಿತು. ಬಹುಸಂಖ್ಯಾತ ಅಸಂಘಟಿತ ಕೂಲಿಗಾರ ವರ್ಗ ಮತ್ತು ವ್ಯವಸಾಯಗಾರವರ್ಗ ಹೊಸ ರಾಜ್ಯ ಸ್ವಾಮ್ಯದ ಬಂಡವಾಳಶಾಹಿಯ (ಸ್ಟೇಟ್ ಕ್ಯಾಪಿಟಲಿಸಮ್) ದಾಸ್ಯವನ್ನಪ್ಪಬೇಕಾಯಿತು.

ಈ ಅವ್ಯಾಹತ ರಾಜಕೀಯ ತುಮುಲಗಳ ಮಧ್ಯೆ ತತ್ವನಿಷ್ಠರಾದ ಪ್ರಜಾತಂತ್ರವಾದಿಗಳೂ, ಸಮಾಜವಾದಿಗಳೂ ಹತಾಶರಾದರು. ಕೇವಲ ಶಸ್ತ್ರ ಸ್ಪರ್ಧೆಯ ಪ್ರೋತ್ಸಾಹದಿಂದ ಒಂದು ಭಯೋತ್ಪಾದಕ ಸಮತೋಲನೆ(ಬ್ಯಾಲೆನ್ಸ್ ಆಫ್ ಟೆರರ್) ಶೀತಲ ಯುದ್ಧಕ್ಕೆ ಕಾರಣವಾಗಿ ಮೌಲ್ಯಾಧಾರಿತ ರಾಜನೀತಿಗೆ ಬೆಲೆಯಿಲ್ಲವಾಯಿತು. ಎಲ್ಲ ದೇಶಗಳಲ್ಲಿಯೂ ಯುದ್ಧ ಮತ್ತು ಶಸ್ತ್ರ ಸನ್ನದ್ಧತೆಯ ಅಪರಿಮಿತ ಉದ್ಯಮಗಳಿಗೆ ಬೆಂಬಲ ದೊರೆತು ಜಗತ್ತಿನ ಸಾಧನ ಸಂಪತ್ತುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗ ಸೈನ್ಯ, ರಕ್ಷಣಾವ್ಯವಸ್ಥೆ, ಹೊಸ ಮಾರಕಾಸ್ತ್ರ ಸಂಶೋಧನೆ, ತಂತ್ರಜ್ಞಾನ ಬೆಳವಣಿಗೆ, ಹೋರಾಟ ಶಿಕ್ಷಣಗಳಿಗೆ ಹರಿದು ಹೋಯಿತು. ಬಡತನ ನಿವಾರಣೆ ಮಾನವಕುಲದ ಸಮಗ್ರ ನೆಮ್ಮದಿ ಎಂಬ ಉದಾತ್ತ ಧ್ಯೇಯಗಳೆಲ್ಲವೂ ಯುದ್ಧ ನಾಗರಿಕತೆಗೆ ಪ್ರಾಸಂಗಿಕವಾದ ವಿಷಯಗಳೆಬ್ಬಿಸಿ ಬಿಟ್ಟವು. ಆಧುನಿಕ ಯಂತ್ರ

ನಾಗರಿಕತೆ ಮತ್ತು ಬಂಡವಾಳಶಾಹೀ ಅರ್ಥ ವ್ಯವಸ್ಥೆ ಸೃಷ್ಟಿಸಿರುವ ಮಾನದಂಡ ಗಳಿಂದಲೇ ರಾಜನೀತಿಯನ್ನು ವಿವೇಚಿಸುವ ರೂಢಮೂಲ ಬೌದ್ಧಿಕ ಕಸರತ್ತು ನಡೆಯುತ್ತಲೇ ಸಾಗಿದೆ. ಈ ರಾಜನೀತಿಯನ್ನು ಸಮಾಪ್ತಿ ಮಾಡುವ ಪ್ರಯತ್ನವೇ ಸರ್ವೋದಯ ಚಿಂತನೆಯಲ್ಲಿ ಲೋಕನೀತಿ ಎಂದು ವಿವರಿಸುತ್ತ ಆಚಾರ್ಯ ವಿನೋಬಾ ಹೀಗೆಂದಿದ್ದಾರೆ:–

'ರಾಜ' ಮತ್ತು 'ನೀತಿ' ಈ ಎರಡು ಶಬ್ದಗಳು ಒಂದಕ್ಕೊಂದು ವಿರೋಧ. ನೀತಿ ಬಂದೆಡೆ 'ರಾಜ' ಎಂಬ ಸಂಸ್ಥೆ ನಾಶವಾಗುತ್ತದೆ; ರಾಜ ಬಂದೆಡೆ ನೀತಿ ಹೆಸರಿಲ್ಲ ದಂತಾಗುತ್ತದೆ. ('ಲೋಕನೀತಿ', ಪುಟ–೪೦)

ಜಗತ್ತಿನ ಸ್ಥಿತಿ ಈಗ ಅತ್ಯಂತ ಚಂಚಲ. ಘಳಿಗೆ ಘಳಿಗೆಗೆ ಒಂದಲ್ಲ ಒಂದು ಸ್ಫೋಟಕ ಸ್ಥಿತಿ ನಿರ್ಮಾಣವಾಗುತ್ತಿದೆ. ರಷ್ಯ ಅಮೇರಿಕಗಳ ಶೀತಲ ಯುದ್ಧ ಕೊನೆಗೊಂಡಂತೆ ಕಂಡರೂ ಈ ಸ್ಥಿತಿ ನಿವಾರಣೆಯಾಗಲಿಲ್ಲ. ಬದಲಾಗಿ ಹೊಸ ಭಯಂಕರ ಸ್ಪರ್ಧೆ ಸಂಪತ್ಸಮೃದ್ಧವೆನಿಸಿದ ರಾಷ್ಟ್ರಗಳ ಒಡಲಿನಲ್ಲೇ ಚಿಮ್ಮುವಂತೆ ಕಾಣುತ್ತಿದೆ. ಶಸ್ತ್ರ ಬಲದ ನಿಯಂತ್ರಣವಾಗದೇ ಹೋದರೆ ಜಗತ್ತಿನ ಸಮಸ್ಯೆ ಗಳಾವುವೂ ಪರಿಹಾರವಾಗದು ಎಂದು ಅಂಗೀಕರಿಸಿದ ರಾಷ್ಟ್ರಗಳೇ ಈಗ ಒಂದು ಬೃಹದ್ ಬಣವಾಗಿ ವಿಶ್ವಸಂಸ್ಥೆಯನ್ನೂ ತನ್ನ ಭಾಗದ ಬೆಂಬಲ ವನ್ನಾಗಿಸಿ ಇರಾಕಿನ ಮೇಲೆ ಧಾಳಿ ಮಾಡಬೇಕಾಯಿತು. ಈ ಸನ್ನಿವೇಶದ ಕಾರಣ ಕೇವಲ ಸದ್ದಾಮ್ ಹುಸೇನನ ರಾಕ್ಷಸೀ ಉದ್ಧಟತನ ಮಾತ್ರವಲ್ಲ. ಲೋಕದಲ್ಲಿ ಪರಸ್ಪರ ವಿಶ್ವಾಸ ವ್ಯಾಪಕವಾಗಿ ನಿಂತು ಅಂತರ್ರಾಷ್ಟ್ರೀಯ ಸ್ನೇಹ ಸಹಕಾರಗಳು ನೆಲೆಗೊಳ್ಳಲಿ ಎನ್ನುವುದು ಜನಕೋಟಿಯ ಅಂತರಾಳದ ಆಸೆ. ಆದರೆ ರಾಜಕಾರಣ ಪಟುಗಳ ವಿಚಾರ ಇದಕ್ಕೆ ಪೋಷಿತವಾಗಿಲ್ಲ. ಒಮ್ಮೆ ನಾಯಕತ್ವ ವಹಿಸಿದ ಕೂಡಲೇ ಅವರ ತರ್ಕ ಬದಲಿಸುತ್ತದೆ. "ಜನತೆ ದುರ್ಬಲರು ಅವರ ಪ್ರತಿನಿಧಿಗಳಾದ ನಾವು ಅವರ ರಕ್ಷಣೆಗಾಗಿ ದಂಡುಕಟ್ಟಬೇಕು, ಶಸ್ತ್ರ ಹೆಚ್ಚಿಸಬೇಕು, ದಮನ ಶಕ್ತಿಯನ್ನು ವರ್ಧಿಸಬೇಕು" ಎನ್ನುತ್ತಾರೆ. ಯಾವುದರಿಂದ ಸೈನ್ಯವು ಬಲಗೊಂಡೀತೋ ಅಂಥ ಯಂತ್ರಗಳಿಗೆ ಪ್ರಥಮ ಆದ್ಯತೆ. ಇವೆಲ್ಲದರ ಹಿಂದೆ ಪರಸ್ಪರರಲ್ಲಿ ಅವಿಶ್ವಾಸ, ಭಯ ಮತ್ತು ಸೈನ್ಯಾವಲಂಬನೆ ಬಿಟ್ಟರೆ ಬೇರೆ ಮಾರ್ಗವೇ ಇಲ್ಲ ಎಂಬ ಗಾಢವಾದ ನಂಬಿಕೆ ತುಂಬಿದೆ. ಸರ್ಕಾರಗಳ ಕೈಗೆ ನಾವು ದಂಡಶಕ್ತಿಯನ್ನು ಕೊಡುತ್ತೇವೆ. ನಂತರ ನಿಸ್ಸಹಾಯಕರಾಗಿ ಸರ್ವಾಧಿಕಾರೀ ರಾಜ್ಯಶಕ್ತಿಗಳ ಸಾಮಯಿಕ ನಿರ್ಣಯ ಗಳಿಗೆ ತಲೆಬಾಗುತ್ತೇವೆ. ವಿಚಾರಶಾಸನಕ್ಕೆ ಅವಕಾಶವೇ ಇಲ್ಲದಾಗುತ್ತದೆ. 'ದಂಡಂ ದಶಗುಣಮ್ ಭವೇತ್', ಇದು ಇಂದಿನ ರಾಜಕೀಯದ ತತ್ವಜ್ಞಾನ.

ಆಕ್ರಮಣ ದಾಹ ಅನೇಕ ಕಾರಣಗಳಿಂದ ಉದ್ಭವವಾಗುತ್ತದೆ. ಕಳೆದ ಎರಡು ಶತಮಾನಗಳಲ್ಲಿ ಆಗಿರುವ ಆಕ್ರಮಣ ಯುದ್ಧಗಳು ಪ್ರಮುಖವಾಗಿ ಆರ್ಥಿಕ ಸಾಮ್ರಾಜ್ಯದಾಹದಿಂದ ಹುಟ್ಟಿದವು. ಲೋಭವೃತ್ತಿಗೆ ಬಲಿಯಾಗಿ ತಮ್ಮ ತಮ್ಮ

ಉತ್ಪಾದಿತ ಸಾಮಗ್ರಿಗಳನ್ನು ಮಾರಲು ವಸಾಹತುಗಳನ್ನು ಸೃಷ್ಟಿಸಿಕೊಳ್ಳುವುದು ಆಧುನಿಕ ವಿಜ್ಞಾನಯುಗದ ಪ್ರಬಲ ಆಕಾಂಕ್ಷೆ. ಮೊದಲನೆ ಮಹಾಯುದ್ಧ ಯೂರೋಪು ರಾಷ್ಟ್ರಗಳಿಗೆ ಕಚ್ಚಾಮಾಲುಗಳನ್ನು ಒದಗಿಸಿಕೊಂಡು ಯಂತ್ರೋದ್ಯಮಗಳ ಬೃಹದ್ ಉತ್ಪಾದನಾ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಲು ಹೂಡಿದ ಬಂಡವಾಳಶಾಹೀ ರಾಷ್ಟ್ರಗಳ ಸ್ಪರ್ಧೆಯ ಪರಿಣಾಮ. ಎರಡನೆಯದು, ವಿಪರೀತವಾಗಿ ಬೆಳೆದ ತಂತ್ರಜ್ಞಾನ ಸ್ವಾಮ್ಯಗಳನ್ನು ರಕ್ಷಿಸಿಕೊಂಡು ವಿಶ್ವದ ಮಾರುಕಟ್ಟೆಗಳ ಗುತ್ತಿಗೆಗಳನ್ನು ಪಡೆದುಕೊಳ್ಳಲು ಎರಡು ಪ್ರಬಲ ಬಣಗಳು ಸೆಣಸಾಡಿದ ಯುದ್ಧ. ಈಗ ಮೂರನೆಯದು, ಇಂದಿನ ಬಂಡವಾಳಶಾಹೀ ನಾಗರಿಕ ರಾಷ್ಟ್ರಗಳಿಗೆ ಅತ್ಯಗತ್ಯವಾಗಿರುವ ನೈಸರ್ಗಿಕ ಇಂಧನಗಳ ಸ್ವಾಮ್ಯಕ್ಕಾಗಿ ನಡೆದ ಹೋರಾಟ. ಅರಬ್ ರಾಷ್ಟ್ರಗಳಲ್ಲಿ ಕೇಂದ್ರಿತವಾಗಿರುವ ಎಣ್ಣೆ ಭಾವಿಗಳ ಬಹುತೇಕ ಉತ್ಪಾದನೆ ಈಗ ಕೇವಲ ನಾಲ್ಕಾರು ದೇಶಗಳಿಗೆ ಹರಿಯುತ್ತದೆ. ವಾಸ್ತವವಾಗಿ ಅರಬ್ ರಾಷ್ಟ್ರಗಳೇ ಕೈಗಾರಿಕಾ ಪ್ರಪಂಚದಲ್ಲಿ ಹಿಂದುಳಿದಿವೆ. ಅತ್ಯಗಾಧ ಸಂಪತ್ತಿನಿಂದ ಸಮೃದ್ಧವಾಗಿದ್ದರೂ ಪರಾವಲಂಬಿ ಆರ್ಥಿಕ ಸಾಮ್ರಾಜ್ಯಗಳನ್ನು ಕಟ್ಟಲು ಕಳೆದ ಐದು ದಶಕಗಳ ಡಾಲರ್ ಸಾಮ್ರಾಜ್ಯ ಕಾರಣವಾಯಿತು. ಎಲ್ಲ ರಾಷ್ಟ್ರಗಳೂ ಅಮೆರಿಕ ದೇಶದ ಸಾಲಗಾರರಾಗಿ ಪರಾಧೀನವಾಗಿವೆ. ಅರಬ್ ರಾಷ್ಟ್ರಗಳಲ್ಲಿ ಒಂದು ಬಂಡೆದ್ದಾಗ ಅದು ದುಸ್ಸಾಹಸವಾಗಿ ಪರಿಣಮಿಸಿತು. ರಾಜಕಾರಣ ಮೌಲ್ಯಗಳಿಗೂ ಮಾನವೀಯ ಧರ್ಮಕ್ಕೂ ತಿಲಾಂಜಲಿ ಇತ್ತ ಸದ್ದಾಮ್‌ಹುಸೇನನಂತಹ ಅಮಾನುಷ ಸರ್ವಾಧಿಕಾರಿಗಳು ವಿಶ್ವದ ನೈತಿಕ ಬೆಂಬಲವನ್ನೆಲ್ಲ ಕಳೆದುಕೊಳ್ಳಬೇಕಾಯಿತು. ಈ ದುರ್ಘಟನೆಯಿಂದ ರಾಜಕಾರಣ ಕ್ಷೇತ್ರ ಪಾಠಗಳನ್ನು ಕಲಿಯಬೇಕಾದುದು ಅಗತ್ಯ.

ಈಗ ಶಾಂತಿಯ ಕರಾರುಗಳನ್ನು ಕುರಿತು ಚರ್ಚೆ ನಡೆಯುತ್ತಿದೆ. ಇಲ್ಲಿಯೂ ಹಣವಂತ ರಾಷ್ಟ್ರಗಳ ಹಿತವೇ ಪ್ರಧಾನವಾಗುತ್ತದೆ. ನಿಶ್ಯಸ್ತ್ರೀಕರಣದ ಮಾತನ್ನು ಈಚೆಗೆ ಅಮೆರಿಕ ಮತ್ತು ರಷ್ಯಗಳು ಪ್ರಬಲವಾಗಿ ಪ್ರತಿಪಾದಿಸುತ್ತಿವೆ. ಆದರೆ ಅಣ್ವಸ್ತ್ರಗಳ ಸ್ವಾಮ್ಯ ಕೆಲವೇ ರಾಷ್ಟ್ರಗಳ ಕೈಲಿಡಬೇಕು ಎಂಬ ಗುತ್ತಿಗೆದಾರಿಕೆಗೆ ಬೆಂಬಲ ನೀಡಿವೆ. ಸೈನ್ಯಬಲದ ಆಧಾರದ ಮೇಲೆ ರೂಪಿತವಾಗುವ ಶಾಂತಿಯ ಮಾತು ಏಕಪಕ್ಷೀಯವಾಗುತ್ತದೆ. ಬಲಾಢ್ಯನ ಕಡೆಗೇ ನ್ಯಾಯ ವಾಲುತ್ತದೆ. ಸೈನಿಕ ಮನೋಧರ್ಮಕ್ಕೆ ಅಣ್ವಸ್ತ್ರಗಳು, ಆಯಕಟ್ಟಿನ ನೆಲೆಗಳು, ವಿವಿಧ ಮಾರಣ ಹೋಮದ ತಂತ್ರಗಳು, ಅತ್ಯಾಧುನಿಕ ಸ್ವಯಂಚಾಲಿತ ಶಸ್ತ್ರ ಸಂಯೋಜನೆಗಳು, ಇದೇ ರಾಷ್ಟ್ರ ಪ್ರಗತಿಯ ಆದ್ಯತೆಗಳೆನಿಸುತ್ತವೆ. ಮಾನವೀಯ ಮೌಲ್ಯಗಳು, ನೀತಿವಂತಿಕೆ, ಪ್ರಾಮಾಣಿಕ ರಾಜಕಾರಣ ನಡವಳಿಕೆಗಳು, ಸರ್ವರ ಸ್ವಾತಂತ್ರ್ಯದ ಹಕ್ಕುಗಳು ಇವೆಲ್ಲವೂ ಸೈನಿಕ ಸಂಸ್ಕೃತಿಯಲ್ಲಿ ಗೌಣ ವಿಷಯಗಳು. ಮನಸ್ಸು ಮತ್ತು ಹೃದಯಗಳಿಗಿಂತ ಸಾಮಯಿಕ ಉಪಾಯ ಪ್ರಜ್ಞೆ, ಬೇಹುಗಾರಿಕೆ, ನಯವಂಚನೆಗಳ ಬೆಳವಣಿಗೆಯನ್ನು ಶಿಕ್ಷಣಕ್ರಮದಲ್ಲಿ ಜೋಡಿಸಲಾಗುತ್ತದೆ. ಸಾಮಾನ್ಯ ಪ್ರಜೆ ಬೃಹದ್ ರಕ್ಷಣಾ ಯಂತ್ರದ ಒಂದು ಜಡ ಭಾಗವಾಗಿರಲು ಎಲ್ಲ ಪ್ರಚಾರ ಸಾಧನ

ಗಳನ್ನೂ ಬಳಸುವುದು ಅಗತ್ಯವೆನಿಸುತ್ತದೆ. ಐನ್‌ಸ್ಟೀನ್‌ರು ಅಭಿಪ್ರಾಯ ಪಡು ವಂತೆ, "ಮಾನವನ ಸಹಜ ಆಕಾಂಕ್ಷೆಗಳೆಲ್ಲ ನಾಶವಾಗುತ್ತಿವೆ. ಸೈನಿಕ ಮನೋವೃತ್ತಿಗೆ ಪ್ರಬಲ ಶಸ್ತ್ರಬಲವೊಂದೇ ಬಾಳಿನ ಗುರಿ ಎನಿಸುತ್ತದೆ. ಇದೊಂದು ವಿಚಿತ್ರ ಮರೀ ಚಿಕೆ ಎಂದರಿಯದೆ ಮಾನವಕುಲ ಬಲಿಯಾಗುತ್ತಿದೆ."

ಇಪ್ಪತ್ತನೇಯ ಶತಮಾನ ತನ್ನ ಕೊನೆಯ ಹಂತದಲ್ಲಿ ರಾಜ್ಯಶಾಸ್ತ್ರದ ಹೊಸ ಶಾಂತಿಪಥವನ್ನರಸುತ್ತ ದಾರಿಗಾಣದೆ ಪರಿತಪಿಸುತ್ತದೆ. ವಿಶ್ವದ ಎಲ್ಲ ರಾಷ್ಟ್ರಗಳಲ್ಲೂ ರಾಜ್ಯ ಸಂಸ್ಥೆ (ಸ್ಟೇಟ್) ಯ ಧೋರಣೆಗಳಿಗೂ ಪ್ರಜಾ ಸಮುದಾಯದ ಮಾನವೀಯ ಆಕಾಂಕ್ಷೆಗಳಿಗೂ ಅಂತರ ಅಗಾಧವಾಗಿ ಹೆಚ್ಚುತ್ತಿದೆ. ಈ ಜನ ಯುದ್ಧದ ಸಮ ಯಕ್ಕೆ ಮಾರಕಾಸ್ತ್ರಗಳ ಪ್ರಯೋಗ ಎಂಥಹ ಸನ್ನಿವೇಶದಲ್ಲೂ ಕೂಡದು ಎಂಬ ಪ್ರಬಲವಾದ ಪ್ರಜಾಭಿಪ್ರಾಯ ಮೂಡಿ ಬಂತು. ನಾಳಿನ ಜಗತ್ತಿನಲ್ಲಿ ಹೊಸ ಹೊಸ ಹೋರಾಟ ಸಮಸ್ಯೆಗಳು ಉದ್ಭವವಾಗುವುದು ಅನಿವಾರ್ಯವೆನಿಸಿದೆ. ಕಾರಣ ಮಾನವ ಕುಲ ಒಂದು ಬೃಹದ್ ಸಮಾಜವೆನ್ನುವ ದೃಷ್ಟಿ ಅತ್ಯಂತ ವ್ಯಾಪಕವಾಗಿ ಪಸರಿಸುತ್ತಿದೆ. ಸಮಾಜ ನ್ಯಾಯ, ಆರ್ಥಿಕ ಸಮಾನತೆ, ಮಾನವ ಹಕ್ಕುಗಳು, ಜೀವಿತಾವಕಾಶಗಳು, ಸರ್ವರ ನೆಮ್ಮದಿ ಇವುಗಳಿಗೆ ಆದ್ಯತೆ ನೀಡುವ ಹೊಸ ರಾಜ್ಯ ಶಾಸ್ತ್ರ ಇಂದಿನ ಯುದ್ಧಕೋರರ ಕಾಡುಗಿಚ್ಚಿನ ಮಧ್ಯದಿಂದ ಚಿಮ್ಮಿ ನಿಲ್ಲಬಹುದೇ ಎಂಬ ಬಯಕೆ ಸಾರ್ವತ್ರಿಕವಾಗುತ್ತದೆ. ಈ ದಿಸೆಯಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸತ್ಯಾಗ್ರಹ ಜೀವನವಿಧಾನ ಒಂದು ಐತಿಹಾಸಿಕ ಸಂಶೋಧನೆ ಎನಿಸಿ ದ್ದರೂ ರಾಜಕಾರಣಪಟುಗಳಿಗೆ ಅದು ಪಥ್ಯವಾಗದೇ ಇರುವುದು ದುರ್ದೈವದ ಸಂಗತಿ. ಮತ್ತೊಮ್ಮೆ ಭಾರತ ಈ ಪಥವನ್ನು ಉದ್ಧರಿಸಿ ಲೋಕಕ್ಕೆ ಮಾರ್ಗ ದರ್ಶನ ನೀಡೀತೇ ಎಂದು ನಿರೀಕ್ಷಿಸುವ ವಿಚಾರವಂತರು ಎಲ್ಲ ರಾಷ್ಟ್ರಗಳಲ್ಲೂ ಈಗ ಧ್ವನಿ ಎತ್ತಿ ನುಡಿಯುತ್ತಿದ್ದಾರೆ. ★

ತಾಯಿಯ ವಿವೇಕ

ಸರ್ವತ್ರ ಸಾಮ್ಯಯೋಗ ಸ್ಥಾಪನೆ ಹೇಗಾದೀತು? ಕೆಲವರಿಗೆ ಹಸಿವು ಹೆಚ್ಚು, ಕೆಲವರಿಗೆ ಹಸಿವು ಕಡಿಮೆ. ಎಲ್ಲರಿಗೂ ಸಮಾನವಾಗಿ ಊಟ ಮಾಡಿಸಲಾದೀತೆ? ಮನುಷ್ಯನಿಗೂ ದನಕ್ಕೂ ಸಮಾನವಾಗಿ ತಿನಿಸುತ್ತೀರಾ? ಎಂಬ ಪ್ರಶ್ನೆಗಳನ್ನು ಕೇಳು ವವರಿದ್ದಾರೆ. ಸಾಮ್ಯಯೋಗವೆಂದರೆ ವಿವೇಕವೇ ಬೇಡ. ತರ–ತಮಭಾವವೇ ಬೇಡ.

ತಾಯಿಗೆ ಮಕ್ಕಳೆಲ್ಲರಲ್ಲೂ ಸಮಾನ ಪ್ರೀತಿ. ಆದರೂ ಇಪ್ಪತ್ತು ವರ್ಷದ ಹುಡುಗನಿಗೆ ಹೆಚ್ಚು ರೊಟ್ಟಿ ಕೊಡುತ್ತಾಳೆ. ೫ ವರ್ಷದವನಿಗೆ ಕಡಿಮೆ. ಒಬ್ಬ ಹುಡುಗನಿಗೆ ಕಾಯಿಲೆಯಾದರೆ ಮನೆಯಲ್ಲಿನ ಹಾಲೆಲ್ಲಾ ಅವನಿಗೇ, ಚೆನ್ನಾಗಿದ್ದವರಿಗೆ ಏನೂ ಇಲ್ಲ. ಇದನ್ನು 'ವಿಷಮತೆ' ಅಥವಾ 'ಭೇದ' ಎನ್ನರು, ವಿವೇಕ ಎನ್ನುತ್ತಾರೆ. ಇಂಥ ವಿವೇಕ ಮನುಷ್ಯನಿಗೆ ಯಾವಾಗಲೂ ಬೇಕು. ಅದಿಲ್ಲದೆ ಏನೂ ಕೆಲಸವಾಗದು. ಆದುದರಿಂದ ವಿವೇಕದೊಡನೆ ಸಾಮ್ಯಯೋಗವನ್ನು ತರಬೇಕು. –ವಿನೋಬಾ

ಜೀವನಶಿಕ್ಷಣ

— ಜೆ. ಸಿ. ಕುಮಾರಪ್ಪ

(ಜೆ. ಸಿ. ಕುಮಾರಪ್ಪ ಪಾಶ್ಚಿಮಾತ್ಯ ಅರ್ಥಶಾಸ್ತ್ರ ಓದಿ ನಂತರ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದ ಓರ್ವ ವಿಚಾರವಂತ ವ್ಯಕ್ತಿ. ಅವರು ಗಾಂಧೀಜಿಯವ ವಿಚಾರಗಳಿಗೆ ಮುಖ್ಯವಾಗಿ, ಆರ್ಥಿಕ ವಿಚಾರಗಳಿಗೆ, ಒಂದು ಸ್ವರೂಪಕೊಟ್ಟರು. ಅದನ್ನು ಅವರು 'ಶಾಶ್ವತ ಅರ್ಥಶಾಸ್ತ್ರ' ಎಂದು ಕರೆದರು. ಈ ಅರ್ಥಶಾಸ್ತ್ರಕ್ಕೂ ಈಗ ಪ್ರಚಲಿತವಿರುವ ಅರ್ಥಶಾಸ್ತ್ರಕ್ಕೂ ಇರುವ ವ್ಯತ್ಯಾಸ ನಮಗೆ ತಿಳಿದರೆ ಅದರಿಂದ ಬಹಳ ಪ್ರಯೋಜನವುಂಟು. ಅದಕ್ಕಾಗಿ ಆ ಪುಸ್ತಕದ ಭಾಗಗಳನ್ನು ಕ್ರಮಶಃ ಪ್ರಕಟಸಲಾಗುತ್ತಿದೆ. ಅನುವಾದ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮ–ಸಂ.)

ವಿಶ್ಲೇಷಣ ಮಾಡಿ ನೋಡಿದರೆ, ಎಲ್ಲಕ್ಕೂ ಶಿಕ್ಷಣವೇ ಆದಿಮೂಲ ಎಂಬುದು ತಿಳಿದುಬರುತ್ತದೆ. ಜನರೆಲ್ಲರೂ ಸಾಮಾನ್ಯವಾಗಿ ಒಂದೇ ದೃಷ್ಟಿಯಿಂದ ಜೀವನವನ್ನು ನಿರೀಕ್ಷಿಸುವಂತೆ ಶಿಕ್ಷಣಕೊಟ್ಟರೆ ನಮ್ಮ ಸಮಸ್ಯೆ ಬಗೆ ಹರಿಯುತ್ತವೆ. ಜೀವನದ ಎಲ್ಲಾ ಕ್ಷೇತ್ರಗಳ ಬಾಗಿಲನ್ನೂ ತೆರೆಯುವ ಬೀಗದ ಕೈ ಶಿಕ್ಷಣ.

ಶಿಕ್ಷಣದ ಅರ್ಥ : ಶಿಕ್ಷಣ ನಮ್ಮನ್ನು ಜೀವನಕ್ಕೆ ಅಣಿಮಾಡಬೇಕು, ಉತ್ತಮ ಪೌರರು, ಉತ್ತಮ ಮಾತಾಪಿತೃಗಳು, ಉತ್ತಮ ಪತಿಪತ್ನಿಯರು ಆಗಮಾಡಬೇಕು–ಎಂದರೆ, ಶಿಕ್ಷಣ ತೊಟ್ಟಲಿನಿಂದ ಚಟ್ಟದವರೆಗೂ ನಡೆಯಬೇಕು. ಮಗುವಾಗಿ ತೊಟ್ಟಿಲಲ್ಲಿ ಬಿದ್ದಾಗಿನಿಂದ ಹೆಣವಾಗಿ ಚಟ್ಟವೇರುವ ತನಕ ಶಿಕ್ಷಣ ಅವ್ಯಾಹತವಾಗಿ ನಡೆಯಬೇಕು, ಬಾಳಿನಲ್ಲಿ ಹಲವಾರು ಪರಿವರ್ತನೆಗಳಾಗುತ್ತವೆ. ಸ್ವಲ್ಪವೂ ಗಾಸಿಗೊಳ್ಳದಂತೆ ಅವನ್ನೆಲ್ಲ ದಾಟಬೇಕು. ಹಾಗಲ್ಲದೆ, ದೊಂಬರ ವಿದ್ಯೆಯಂತೆ ಕೆಲವು ಲಾಗಗಳನ್ನು, ಯುಕ್ತಿಗಳನ್ನು ಮಾತ್ರವೇ ಕಲಿಸಿದರೆ ನಾವು ಕಂಡು ಕೇಳಿ ಅರಿಯದ ಪ್ರಸಂಗಗಳಲ್ಲಿ ಹತವೀರ್ಯರಾಗುತ್ತೇವೆ. ಶಿಕ್ಷಣ ನಮ್ಮ ಮೆದುಳಿನಲ್ಲಿ ಅಂಕಿ–ಅಂಶಗಳನ್ನು ಕೂರಿ ತುರುಕಬಾರದು. ಜೀವನದ ಬಗ್ಗೆ ಒಂದು ದೃಷ್ಟಿಯನ್ನು, ಒಂದು ಮನೋಧರ್ಮವನ್ನು ನೀಡಬೇಕು.

ಶಿಕ್ಷಣ ಪದ್ಧತಿಗೆ ಆಧಾರವಾಗಿ ಒಂದು ತತ್ವವಿರಬೇಕು. ವ್ಯಕ್ತಿಯು ಉತ್ತಮ

ಗುಣಗಳ ವಿಕಾಸವೇ ಅದರ ಗುರಿಯಾಗಿರಬೇಕು. ಆದುದರಿಂದ ಶಿಕ್ಷಣ ಬರೀ ಮಾತಲ್ಲ. ಬಹಳ ದೊಡ್ಡ ಜವಾಬದಾರಿ. ಚೆನ್ನಾಗಿ ವಿಚಾರ ಮಾಡದೆ, ಸಿದ್ಧತೆ ಮಾಡಿಕೊಳ್ಳದೆ ಶಿಕ್ಷಣವನ್ನು ಪ್ರಾರಂಭಿಸಬಾರದು.

ದುರ್ದೈವದಿಂದ, ಬರೀ ಓದು-ಬರಹವನ್ನೇ ವಿದ್ಯೆ ಎನ್ನುವ ಕಾಲ ಬಂದಿದೆ. ಇದಕ್ಕಿಂತ ಬೇರೆ ಆಭಾಸವಿಲ್ಲ. ಸಂಸ್ಕೃತಿಯನ್ನು ಗಳಿಸಲು, ಓದುಬರಹವೂ ಒಂದು ಸಾಧನ. ಅದೊಂದೇ ಸಾಧನವೂ ಅಲ್ಲ, ಮುಖ್ಯವಾದ ಸಾಧನವೂ ಅಲ್ಲ.

ಉದ್ದೇಶಪೂರ್ಣ ಶಿಕ್ಷಣ : ಅನೇಕ ದೇಶಗಳಲ್ಲಿ ಶಿಕ್ಷಣಕ್ಕೊಂದು ಗುರಿ, ಉದ್ದೇಶ ಇದೆ. ಔದ್ಯೋಗಿಕ ದೇಶಗಳಲ್ಲಿ ಉದ್ಯೋಗಪತಿಗಳು ಶಿಕ್ಷಣ ತಮ್ಮ ಉದ್ಯೋಗಗಳಿಗೆ ಕೆಲಸಗಾರನ್ನು ಒದಗಿಸುವ ಏರ್ಪಾಡು ಎಂದು ತಿಳಿಯುತ್ತಾರೆ. ಸಮಾಜವಾದದ ದೇಶಗಳಲ್ಲಿ ಶಿಕ್ಷಣಕ್ಕೂ ಪದಾರ್ಥಗಳ ಉತ್ಪಾದನೆಗೂ ತಳುಕು. ಸೇನಾಪ್ರಧಾನ ದೇಶಗಳಲ್ಲಿ ಶಿಕ್ಷಣವೆಂಧರೆ ಸಂಕುಚಿತ ದೇಶಭಕ್ತಿಯ ಪ್ರೇರಣೆ.

ಪೂರ್ವ ದೇಶದ ಪದ್ಧತಿ : ನಮ್ಮ ದೇಶದಲ್ಲಿ ಹಿಂದಿನ ಕಾಲದಲ್ಲಿ ವಿದ್ಯಾಭ್ಯಾಸ ವೆಂದರೆ ಜೀವನದ ಸಿದ್ಧತೆ. ವಿದ್ಯಾರ್ಥಿ ತನಗೆ ಬೇಕಾದ ಗುರುವನ್ನು ಆರಿಸಿಕೊಂಡು, ಆ ಗುರುವಿನ ಕಣ್ಣೆದುರಿಗೇ ಅವರ ಆಶೀರ್ವಾದ ಪಡೆದು ನಿತ್ಯಜೀವನವನ್ನು ನಡಸು ತ್ತಿದ್ದ. ಆಧ್ಯಾತ್ಮ ವಿದ್ಯೆಯೇ ಅಲ್ಲ, ಎಲ್ಲಾ ವಿದ್ಯೆಗಳಲ್ಲಿಯೂ ಹೀಗೇ. ಗುರು ವಿಗೆ ಶಿಕ್ಷಣ ಒಂದು ವೃತ್ತಿಯಾಗಿರಲಿಲ್ಲ. ತಂದೆಯು ಮಕ್ಕಳನ್ನು ನೋಡಿಕೊಳ್ಳುವ ಹಾಗೆ ಶಿಷ್ಯರನ್ನು ನೋಡಿಕೊಳ್ಳುತ್ತಿದ್ದ. ಗುರು ತನ್ನ ಜೀವನವನ್ನು ನಡೆಸುತ್ತಿದ್ದರೆ ಶಿಷ್ಯರು ಆ ಜೀವನದಿಂದ ತಮಗೆ ಅರ್ಥವಾದಷ್ಟು ಜೀವನ ರಹಸ್ಯವನ್ನು ಅರಿತು ಕೊಳ್ಳುತ್ತಿದ್ದರು. ಯೇಸು ತನ್ನ ಶಿಷ್ಯರನ್ನಾರಿಸಿಕೊಂಡು 'ನನ್ನ ಹಿಂದೆ ಬನ್ನಿ' ಎಂದಾಗ ಅವರಿಗೆ ಓದಲು ಒಂದು ಪುಸ್ತಕಗಳ ಪಟ್ಟಿಯನ್ನು ಕೊಡಲಿಲ್ಲ. ತಮ್ಮ ಗುರುವಿನ ಹೆಜ್ಜೆಯನ್ನು ಅವರು ಹಿಂಬಾಲಿಸಬೇಕು. ಅದು ನಮ್ಮ ಶಿಕ್ಷಣ ಪದ್ಧತಿ.

ನಿಜವಾದ ಆರ್ಥಿಕ ಮೂಲ್ಯ : ಪಾಶ್ಚಿಮಾತ್ಯ ವ್ಯಾಪಾರದ ಸಂಪರ್ಕದಿಂದ ನಾವು ಬಂಗಾರದ ಪೂಜೆ ಮಾಡತೊಡಗಿದ್ದೇವೆ. ನಮ್ಮ ಸಂಸ್ಕೃತಿ – ಸ್ವಧರ್ಮ ಎಲ್ಲಾ ಹಣದ ಅಳತೆಯಲ್ಲಿ ಸೋತಿವೆ. ನಮಗೀಗ ಮಾನವತೆಯೆಲ್ಲ ಬೇಕಾದುದು, ಬಂಗಾರ, ಬ್ರಾಹ್ಮಣ ಸಂಸ್ಕೃತಿಯ ಲಕ್ಷಣಗಳೆಲ್ಲ ನಶಿಸಿ ಪಶ್ಚಿಮದ ವರ್ತಕತನದ ನಾಗರಿಕತೆ ಬಂದಿವೆ. ಬ್ರಾಹ್ಮಣ ತನ್ನ ಸೊತ್ತು ಸಂಪತ್ತಿಗಾಗಿ ಪೂಜ್ಯನಾಗಿರಲಿಲ್ಲ; ಪ್ರತಿಫಲಾ ಪೇಕ್ಷೆಯಿಲ್ಲದೆ ಅವನು ಮಾಡುತ್ತಿದ್ದ ಲೋಕಸೇವೆಯಿಂದ. ಪ್ರಥಮ ತತ್ವಗಳನ್ನು ಪ್ರಥಮದಲ್ಲಿ ಎಣಿಸದ ಯಾವ ಶಿಕ್ಷಣ ಪದ್ಧತಿಯೂ ನಮಗೆ ಗಮನಾರ್ಹವಲ್ಲ. ಜನ ತೆಗೆ ಶಿಕ್ಷಣ ಕೊಡುವ ಸರ್ವ ಪ್ರಯತ್ನವೂ ನಿಜವಾದ ಆರ್ಥಿಕ, ಸಾಮಾಜಿಕ, ಸಾಂಪ ತ್ತಿಕ ಮೂಲ್ಯಗಳನ್ನು ಅರಿಯಲು ಕಲಿಯಬೇಕು.

ಜೀವನದ ವೈವಿಧ್ಯ : ಮನುಷ್ಯ ನಾನಾ ಮುಖದ ಜೀವಿ. ಅವನ ಬಾಳಿಗೆ ಗೆರೆ ಎಳೆದು ತುಂಡುತುಂಡಾಗಿ ಮಾಡಿ ಈ ಭಾಗ ಇಷ್ಟು ಎಂದು ಹೇಳುವಂತಿಲ್ಲ. ಈ ಭಾಗವನ್ನು ಬೆಳೆಸೋಣ ಎನ್ನಲಾಗದು. ಶಾರೀರಿಕ, ನೈತಿಕ, ಆಧ್ಯಾತ್ಮಿಕ ಅಂಶಗಳನ್ನೂ ಕೈಬಿಟ್ಟು ಬರೀ ಬೌದ್ಧಿಕ ವಿಕಾಸವನ್ನೇ ಗಮನಿಸಿದರೆ ವಿಕೃತ ವ್ಯಕ್ತಿಗಳಾಗುತ್ತಾರೆ. ನಿಜವಾದ ಶಿಕ್ಷಣ ನಮ್ಮ ಗುರಿಯಾದರೆ ಇವೆಲ್ಲ ಅಂಶಗಳನ್ನೂ ಏಕಕಾಲದಲ್ಲಿ ಬೆಳೆಸಬೇಕು. ಶಾರೀರಿಕ, ಸಾಮಾಜಿಕ, ಬೌದ್ಧಿಕ, ಆಧ್ಯಾತ್ಮಿಕ–ಎಲ್ಲದರಲ್ಲಿಯೂ ವ್ಯಕ್ತಿ ಬೆಳೆಯಬೇಕು. ಅವನು ಜೀವನೋಪಾಯಕ್ಕಾಗಿ ಒಂದು ವೃತ್ತಿಯನ್ನು ಕಲಿಯಬೇಕು, ಸಮಷ್ಟಿಯಲ್ಲಿ ಸೇರಿ ಬಾಳುವುದನ್ನು ಕಲಿಯಬೇಕು, ಜನರನ್ನು–ಜೀವನವನ್ನು ಅಳೆಯುವ ಶಕ್ತಿಯನ್ನು ಪಡೆಯಬೇಕು. ಇವೆಲ್ಲವನ್ನೂ ಸಾಧಿಸಲು ಪ್ರಯತ್ನಿಸದಿದ್ದರೆ ಅದು ಶಿಕ್ಷಣವೇ ಅಲ್ಲ.

ನಾವು ಮಾಡಿದ ಪ್ರತಿಯೊಂದು ಕರ್ಮವೂ ನಮ್ಮ ಮೇಲೆ ಒಂದು ಗುರುತು ಮಾಡಿ ತೀರುತ್ತದೆ. ಅದನ್ನು ಅಳಿಸಲು ಸಾಧ್ಯವಿಲ್ಲ. ನಮ್ಮ ಕೆಲಸ, ಆಟ, ವಿನೋದ, ವಿಶ್ರಾಂತಿ ಎಲ್ಲವನ್ನೂ ಎಚ್ಚರಿಕೆಯಿಂದ ಯೋಜನೆಮಾಡಬೇಕು. ಆಗ ಇದರ ಸಾಮಾಜಿಕ ಪ್ರತಿಕ್ರಿಯೆ ಆರೋಗ್ಯವಂತವಾಗಿದ್ದೀತು. ಕರ್ಮಶಿಕ್ಷಣವೇ ಮನುಷ್ಯ ಜೀವನದ ಬಹು ಭಾಗಕ್ಕೆ ಹೋದಿದುದು. ನಮ್ಮ ಕಾಲವೆಲ್ಲ ಹೆಚ್ಚಾಗಿ ಆರ್ಥಿಕ ವ್ಯಾಪಾರದಲ್ಲಿಯೆ ಕಳೆಯುತ್ತದೆ ಆದುದರಿಂದ ಉತ್ಪಾದನೆ ಮಾಡುವ ಕ್ರಮದಲ್ಲಿಯೆ ನಮ್ಮ ಗುಣ–ಕೌಶಲ ವೃದ್ಧಿಯಾಗುವಂತೆ, ನಮ್ಮ ಜೀವನ ತುಂಬಿ ಬರುವಂತೆ ಯೋಜನೆ ಮಾಡಿದರೆ ಅಷ್ಟರಮಟ್ಟಿಗೆ ರಾಷ್ಟ್ರವೂ ಅಭಿವೃದ್ಧಿಗೊಳ್ಳುತ್ತದೆ. ಯೋಗ್ಯವಾದ ಕೆಲಸ ರಾಷ್ಟ್ರಕ್ಷಯಕಾರಿಯಲ್ಲ, ನಿರ್ಮಾಣಕಾರಿ. ನಾವು ಮಾಡುವ ಕೆಲಸ ನಮ್ಮ ಜೀವನದ ಆದರ್ಶವನ್ನು ಆಚರಣೆಗೆ ತರಲು ಸಹಾಯಕವಾಗಿರಬೇಕು. ಬರೀ ಗಂಟೆ–ಜಾಗಟೆ, ಧೂಪದೀಪ, ಆರತಿಗಳಲ್ಲಿ ಪರ್ಯವಸಾನವಾಗುವ ಧರ್ಮ ಟೊಳ್ಳು. ಧರ್ಮ ನಮ್ಮ ಜೀವನದ ಪ್ರತಿಯೊಂದು ಕರ್ಮವನ್ನೂ, ಪ್ರತಿಯೊಂದು ಗಳಿಗೆಯನ್ನೂ ಆವರಿಸದಿದ್ದರೆ ಅದು ಬರೀ ಬರಡು. ವ್ಯಕ್ತಿಯನ್ನೂ ಜನಾಂಗವನ್ನೂ ಬೆಳೆಸುವುದರಲ್ಲಿ ಕೆಲಸ ಎಷ್ಟು ಮುಖ್ಯ ಸಾಧನ ಎಂಬುದನ್ನು ಕೆಲಸ ಎಂಬ ಪ್ರಕರಣದಲ್ಲಿ ಓದಿದೇವೆ. ವ್ಯಕ್ತಿ ವಿಕಾಸದಲ್ಲಿ ಕೆಲಸ ಅಂಥ ಪ್ರಬಲ ಶಕ್ತಿಯಾದರೆ ಮಗುವಿನ ಬೆಳವಣಿಗೆಗೆ ನಾವು ಅದನ್ನು ಉಪಯೋಗಿಸಬೇಡವೆ?

ನಮ್ಮ ಪ್ರಯತ್ನಗಳೆಲ್ಲ ಹಳ್ಳಿಗಳಲ್ಲಿ ನಡೆಯಬೇಕು. ವಿಶ್ವವಿದ್ಯಾನಿಲಯದ ಶಿಕ್ಷಣವನ್ನು ನಾಲ್ಕು ವರ್ಷ ಕೈಬಿಟ್ಟರೂ ರಾಷ್ಟ್ರಕ್ಕೇನೂ ನಷ್ಟವಾಗದು. ಈಗಲೇ ನಮಗೆ ತಲೆ ಭಾರವಾಗಿದೆ. ಬೇಕಾದುದಕ್ಕಿಂತ ಹೆಚ್ಚು ಜನ ಪದವೀಧರರಿದ್ದಾರೆ. ಇವರು ಪಡೆದ ಶಿಕ್ಷಣ ನಮಗೆ ಅಗತ್ಯವಾದುದಲ್ಲ. ಆದುದರಿಂದ ಇವರು ನಿರುದ್ಯೋಗಿಗಳಾಗಿ ಕುಳಿತಿದಾರೆ. ಇಲ್ಲದಿದ್ದರೆ ಇವರಿಗೆ ಮಾಡಲು ಕೆಲಸ ಸಿಗುತ್ತಿರ

ಲಿಲ್ಲವೆ? ನಮ್ಮ ಹಳ್ಳಿಗಳು ಹೆಚ್ಚು ಸಮರ್ಥವೂ ಪ್ರಯೋಜನಸಕರ್ಥವೂ ಆಗುವಂತೆ ಮಾಡಬೇಕಾಗಿದೆ. ಸುಮ್ಮನೆ ಹಾಳುಮೂಳು ಸುದ್ದಿಗಳನ್ನೆಲ್ಲ ಅಲ್ಲಿ ತುರುಕ ಬೇಕಾಗಿಲ್ಲ. ಆಕಾಶವಾಣಿ, ಚಲಚ್ಚಿತ್ರಗಳಿಂದ ಸ್ವಲ್ಪ ಸಹಾಯವಾದೀತೋ ಏನೋ, ಆದರೆ ಶಿಕ್ಷಣದ ಪ್ರಧಾನ ಸಾಧನಗಳಲ್ಲ ಅವು. ಅವಕ್ಕಾಗಿ ನಾವು ವೆಚ್ಚ ಮಾಡುವ ಹಣ ಬಹಳ ಹೆಚ್ಚು. ಅವಕ್ಕಾಗಿ ಹಳ್ಳಿಯೊಳಗಿರುವುದನ್ನೇ ವೃದ್ಧಿಗೊಳಿಸಬೇಕು. ಎಲ್ಲಿಂದಲೋ ತಂದು ಅದರ ಮೇಲೆ ಹೇರಿದರೆ ಆಗದು. ಹೊರಗಿನಿಂದ ತಂದುದನ್ನು ಕೃತಕ ಸಾಧನಗಳಿಂದ ಬೆಳೆಸಬೇಕಾಗುತ್ತದೆ. ಆದರೆ ಒಳಗಿನಿಂದ ಬೆಳೆದು ಬಂದುದು ನಿಜವಾದ ಸಂಸ್ಕೃತಿಯನ್ನು ವಿಕಾಸಗೊಳಿಸಿ, ಮನುಷ್ಯ – ಮನುಷ್ಯನನ್ನು, ಹಳ್ಳಿ ಹಳ್ಳಿಯನ್ನು, ಕಡೆಗೆ ಇಡೀ ದೇಶವನ್ನೂ ಒಂದಾಗಿ ಒಗ್ಗಟ್ಟಾಗಿ ಕಟ್ಟುತ್ತದೆ.

ಇದಕ್ಕಾಗಿ ಎಂಥ ವ್ಯವಸ್ಥೆ ಇರಬೇಕು ಎಂಬುದು ಬಹಳ ಮುಖ್ಯವಲ್ಲ. ಸಂಸ್ಥೆಗಳು ಎಷ್ಟೇ ಮುಖ್ಯವಾದರೂ ಅವಕ್ಕೇ ಜೋತು ಬಿದ್ದರೆ ವ್ಯಕ್ತಿ ಪ್ರಭಾವನನ್ನು ಕಳೆದುಕೊಳ್ಳುತ್ತೇವೆ. ಕಡೆಗೆ ಸಂಸ್ಥೆ ಕಲ್ಲಾಗುತ್ತದೆ, ಅಪಾರ ಧನವನ್ನು ನುಂಗುತ್ತದೆ. ಉಳಿದ ಕಡೆ ಮಾಡಿದಂತೆ ಶಿಕ್ಷಣದಲ್ಲಿಯೂ ಕೇಂದ್ರೀಕರಣಮಾಡಿದರೆ ದೂರದಲ್ಲಿರುವವರು ಯಾರೋ ಯಾಜಮಾನ್ಯ ಮಾಡುವಂತಾಗುತ್ತದೆ. ಅದರಿಂದ ಏನೋ ಕೃತ್ರಿಮತೆ, ಕಾಠಿನ್ಯ ತಲೆದೋರಿ ಶಿಕ್ಷಣಕ್ಕೇ ಸಂಚಕಾರವಾಗುತ್ತದೆ. ಹಳ್ಳಿಯ ಶಿಕ್ಷಕ ತನ್ನ ನೆರೆಹೊರೆಯವರ ಕಣ್ಣೆದಿರಿನಲ್ಲಿಯೆ ಕೆಲಸ ಮಾಡುವುದು ಒಳಿತು. ಆದುದರಿಂದ ಆಯಾ ಹಳ್ಳಿಯೇ ತನ್ನ ಶಿಕ್ಷಣದ ವೆಚ್ಚವನ್ನು ವಹಿಸುವುದು ಸರಿ. ಹಳ್ಳಿಯ ವಿದ್ಯಾಮಂದಿರಕ್ಕೆ ಹೊಲವನ್ನು ಬಿಟ್ಟುಕೊಡಲಿ. ಈ ಪದ್ಧತಿಗೆ ಕೇಂದ್ರದ ಮೇಲ್ವಿಚಾರಣೆಯೂ ಸಲಹೆಯೂ ದೊರೆತರೆ ನಮ್ಮ ದೇಶಕ್ಕೆ ಒಳ್ಳೆಯ ಮಾದರಿಯಾಗಬಹುದು. ಸ್ಥಳದವರ ಅಭಿಪ್ರಾಯಕ್ಕೆ ಅಧೀನ ಅದರ ವ್ಯವಸ್ಥೆ, ಈಗಿರುವ ಹಾಗೆ ವರ್ಷಕ್ಕೊಂದು ಸಲ ವಿದ್ಯಾಧಿಕಾರಿಯ ಪರೀಕ್ಷೆಗೆ ಸಿದ್ಧವಾಗಿದ್ದರಾಯಿತು. ಶಿಕ್ಷಕ. ಆದು ಮುಗಿದ ಮೇಲೆ ಯಾವ ಚಿಂತೆಯೂ ಇಲ್ಲ. ಇದರಿಂದ ಪ್ರಗತಿಯಾಗದು. ಕ್ರಮವಾದ ಕೆಲಸವೂ ಆಗದು. ಪ್ರತಿಯೊಂದು ಪಾಠಶಾಲೆಯೂ ಸಂಸ್ಕೃತಿ ಕೇಂದ್ರವಾಗಬೇಕು. ಹೊರಗಣ ಪ್ರಪಂಚಕ್ಕೂ ಹಳ್ಳಿಗೂ ಮಧ್ಯಬಿಂದುವಾಗಬೇಕು. ಇದರಲ್ಲಿ ಒಂದು ಬಾಧಕವಿದೆ : ತನ್ನ ಸಾಮಾಜಿಕ ಕರ್ತವ್ಯವನ್ನೇ ಮುಖ್ಯವಾಗಿ ಮಾಡಿಕೊಂಡು ಶಿಕ್ಷಕ ಮಕ್ಕಳ ಪ್ರಗತಿಯನ್ನು ಅಸಡ್ಡೆಮಾಡಬಹುದು. ಸಾಮಾಜಿಕ ಅಂಶ ಪಾಠಶಾಲೆಯ ಮುಖ್ಯ ಫಲವಲ್ಲ, ಪ್ರಾಸಂಗಿಕ ಫಲ. ಮಾನವ ಸ್ವಭಾವವನ್ನು ನಂಬಿ ಆತ್ಮವಿಶ್ವಾಸದಿಂದ ಆದರ್ಶದ ಧ್ರುವತಾರೆಯನ್ನು ಲಕ್ಷ್ಯವಾಗಿಟ್ಟು ನಡೆಯೋಣ. ಚಿಲ್ಲರೆ ಅಂಶಗಳಲ್ಲಿ ಭಿನ್ನಾಭಿಪ್ರಾಯ ಹಲವಿರಬಹುದು. ಈ ವೈವಿಧ್ಯ ಕಂಡರೂ ನಿಜವಾದ ಸಂಸ್ಕೃತಿಯನ್ನು ಬೆಳೆಸಿ, ಪ್ರಾಮಾಣಿಕವಾದ ಮೂಲ್ಯಗಳನ್ನು ನಿರ್ಮಿಸಿ, ಭದ್ರವಾದ ಏಕತೆಯನ್ನು ಪಡೆಯಬಹುದು.

(ಸಶೇಷ)

ಯುದ್ಧ

ಅರ್ಥವಾಯಿತು ನನಗೆ ಈಗ
ಯುದ್ಧವೆಂದರೆ ಗದ್ದುಗೆಯಲ್ಲಿರುವವರ
ತೀಟೆ, ಚಪಲಗಳು. ದೇಶೋದ್ಧಾರದೆ ಮುಖವಾಡದಲ್ಲಿ
ಮುಗುಳು ನಕ್ಕು, ಮೈಅಪ್ಪುವ ಸೈತಾನ ಬೇತಾಳಗಳು.

ಎದೆಯೊಳಗಣ ಈ ಕುಂಭ ಕರ್ಣಗೆ
ಶತಮಾನಕ್ಕೊಮ್ಮೆ ಎಚ್ಚರವೆ? ಏಳುವವರೆಗೂ
ಆಲಾಪ, ಪ್ರಲಾಪ, ಪ್ರಚೋದನೆ. ಎದ್ದರೆ ಮುಗಿಯಿತು
ಮತ್ತಿವಗೆ ಗಾಢ ನಿದ್ದೆಯ ಮತ್ತು ಹತ್ತುವವರೆಗೆ
ಕೋಟಿ ಕೋಟಿ ಪ್ರಾಣಗಳ ತುತ್ತು ಬಡ ಮಾರಿಗೆ.

ನಂಬಲೇ ಬೇಕಿದೆ ಇನ್ನು –
ಆಧುನಿಕತೆಯ ಉತ್ಕರ್ಷದೆತ್ತರದಲ್ಲಿ
ಕಣ್ಮುಚ್ಚಿ ಕುಳಿತಿರುವ "ಮಠದ ಬೆಕ್ಕಿ"ಗೆ
ಸಂಚು ನೋಡಿ ಪುಟನೆಗೆವ ತಂತ್ರ–
ಹುಟ್ಟು ಗುಣವೆಂದು.

ಯುಗ ಯುಗಗಳಿಂದಲೂ ನೀತಿ ಬೋಧನೆ ಮಾಡಿ
ತಿಕ್ಕಿ, ತೀಡಿ, ಮೈದಡವಿ ಹಾಲುಣಿಸಿದರೂ
ಒಳಗೊಳಗೇ ವಿಷ ಸಂಚಯ ನಡೆದೇ ಇರುತ್ತದೆ.
ಸನ್ಯಾಸಿ ಎದೆಯ ಸ್ಖಲಿತ ಭಾವನೆಯಂತೆ
ಒಂದೇ ಕ್ಷಣದಲ್ಲಿ ಮೂಡಿ ಮುಳುಗುವುದು
ಮುಂಪರು ಮುಂಪರು, ಕತ್ತಲೆ – ಬೆಳಕು.

ಮತ್ತೆ ಇದ್ದದ್ದೇ – ಪಶ್ಚಾತ್ತಾಪ.
ಗುಡಿಯ ನವೀಕರಣ, ತಳುಕು ಬೆಳಕಿನ ತೋರಣ
ಆದರೆ – ಈ ನೆಲ ಮಾಳಿಗೆಯೊಳಗೆ ಹೃದಯ ಕಳಕೊಂಡು
ದಿಕ್ಕೆಟ್ಟ ಜೀವಿಗಳ ರೋದನ ನಿರಂತರ.

– ಟಿ. ಎಂ. ಷಡಕ್ಷರಿ

ಏಕಾಗ್ರತೆ

ಒಬ್ಬ ಮುಸಲ್ಮಾನ ಸಾಧು ಇದ್ದ. ಅವನ ಶರೀರದಲ್ಲೊಂದು ಬಾಣ ಸೇರಿತು. ಅದರಿಂದ ತುಂಬಾ ನೋವಾಗುತ್ತಿತ್ತು. ಬಾಣವನ್ನು ಕೀಳಲು ಹೋದರೆ ಕೈ ಹಚ್ಚುತ್ತಲೂ ನೋವು ಇನ್ನೂ ಹೆಚ್ಚುತ್ತಿತ್ತು. ಹೀಗಾಗಿ ಅದನ್ನು ತೆಗೆಯುವುದೇ ಅಸಾಧ್ಯವಾಯಿತು.

ಈಗಿನ ಕ್ಲೋರೋಫಾರ್ಮಿನಂಥ ಅಮಲಿನ ಔಷಧವೂ ಆಗ ಇರಲಿಲ್ಲ. ಸರಿ, ದೊಡ್ಡ ಸಮಸ್ಯೆಯೇ. ಆ ಸಾಧುವನ್ನು ಬಲ್ಲ ಕೆಲವರು ಮುಂವೆ ಬಂದು, “ಬಾಣ ತೆಗೆಯುವುದು ಸಧ್ಯ ಹಾಗಿರಲಿ. ಮೊದಲು ಆತ ಪ್ರಾರ್ಥನೆಗೆ ತೊಡಗಲಿ, ಅನಂತರ ಅದನ್ನು ತೆಗೆದರಾಯಿತು” ಎಂದರು.

ಸಾಯಂಕಾಲದ ಪ್ರಾರ್ಥನೆಯ ಸಮಯವಾಯಿತು. ಸಾಧು ಪ್ರಾರ್ಥನೆಯಲ್ಲಿ ತಲ್ಲೀನನಾದ. ಆಗ ಅವನ ಶರೀರದಿಂದ ಬಾಣವನ್ನು ಕಿತ್ತರೂ ಅದರ ಅರಿವು ಅವನಿಗಿರಲಿಲ್ಲ. ಇದು ಎಂಥ ಏಕಾಗ್ರತೆ !

ವ್ಯವಹಾರವಿರಲಿ ಪರಮಾರ್ಥವಿರಲಿ. ಚಿತ್ತದ ಏಕಾಗ್ರತೆಯಿಲ್ಲದೆ ಅದರಲ್ಲಿ ಯಶಸ್ಸು ಸಿಕ್ಕುವುದು ಕಠಿಣ. ಚಿತ್ತ ಏಕಾಗ್ರವಾದರೆ ಎಂದಿಗೂ ಸಾಮರ್ಥ್ಯ ಕಡಿಮೆಯಾಗಲಾರದು. ನಮ್ಮ ಸೋಲು ಗೆಲುವು ನಮ್ಮ ಏಕಾಗ್ರತೆಯನ್ನು ಅವಲಂಬಿಸಿದೆ.

– ವಿನೋಬಾ

ಜನಪದ ವಿಚಾರ ಮಾಸಪತ್ರಿಕೆಯ ಒಡೆತನದ ವಿವರ

ಫಾರ್ಮ್ ೪ (ನಿಯಮ ೮)

1.	ಪ್ರಕಟನೆಯ ಸ್ಥ	:	ಮೇಲುಕೋಟೆ
2.	ಪ್ರಕಟಣೆಯ ಅವಧಿ	:	ಮಾಸ ಪತ್ರಿಕೆ
3,	ಮುದ್ರಕರ ಹೆಸರು	:	ಸುರೇಂದ್ರ ಕೌಲಗಿ
	ಭಾರತದ ಪ್ರಜೆಯೇ	:	ಹೌದು
	ವಿಳಾಸ	:	ಜನಪದ ಸೇವಾ ಟ್ರಸ್ಟ್
		:	ಮೇಲುಕೋಟೆ
4.	ಪ್ರಕಾಶಕರ ಹೆಸರು	:	ಸುರೇಂದ್ರ ಕೌಲಗಿ
	ಭಾರತದ ಪ್ರಜೆಯೇ	:	ಹೌದು
	ವಿಳಾಸ	:	ಜನಪದ ಸೇವಾ ಟ್ರಸ್ಟ್.
5.	ಸಂಪಾದಕರ ಹೆಸರು	:	ಎಸ್. ಪಟ್ಟಾಭಿರಾಮನ್
	ಭಾರತದ ಪ್ರಜೆಯೇ	:	ಹೌದು
	ವಿಳಾಸ	:	ಮೊದಲನೇ ಕ್ರಾಸ್, ಯಾದವಗಿರಿ, ಮೈಸೂರು
6.	ಒಡೆತನ	:	ಜನಪದ ಸೇವಾ ಟ್ರಸ್ಟ್ (ರಿ) ಮೇಲುಕೋಟೆ

ಮೇಲೆ ಕಾಣಿಸಲಾದ ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯ.

ತಾ॥ 15–3–91

ಸುರೇಂದ್ರ ಕೌಲಗಿ
ಪ್ರಕಾಶಕರು

KRNM 44

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಮೇಲುಕೋಟೆಯ
ಜನಪದ ಸೇವಾ ಟ್ರಸ್ಟ್ ಮುದ್ರಣಾಲಯದಲ್ಲಿ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.
ಸಂಪಾದಕರು : ಎಸ್. ಪಟ್ಟಾಭಿರಾಮನ್ ಸಹಾಯಕ ಸಂಪಾದಕರು : ಸುರೇಂದ್ರ ಕೌಲಗಿ